بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّىْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 04

ಸಂಚಿಕೆ: 28

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

13 ಜುಲೈ 2023, 13 ವಫಾ 1402 ಹಿಜರಿ ಶಮ್‌ಸಿ,
24 ಝಿಲ್‌ಹಜ್ಜ 1444 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ.

## ಅಲ್ಲಾಹನ ಉಪದೇಶ

وَلَا تَجْعَلْ مَعَ اللّٰهِ
اِلٰهًا اٰخَرَ فَتُلْقٰى فِيْ جَهَنَّمَ
مَلُوْمًا مَّدْحُوْرًا

(ಬನೀ ಇಸ್ರಾಈಲ್: 40)

**ಅಂದರೆ: ನೀನು ಅಲ್ಲಾಹನೊಂದಿಗೆ ಬೇರೆ ಯಾರನ್ನೂ ಆರಾಧ್ಯನಾಗಿ ಮಾಡಬೇಡ. ಹಾಗೆ ಮಾಡಿದರೆ, ನೀನು ನಿಂದಿಸಲ್ಪಟ್ಟವನಾಗಿಯೂ ತ್ಯಜಿಸಲ್ಪಟ್ಟವನಾಗಿಯೂ ನರಕಕ್ಕೆ ಎಸೆಯಲ್ಪಡುವೆ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಮದೀನದ ಪ್ರಾಮುಖ್ಯತೆ

**(1871)** ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ನುಡಿದರು. ನನಗೆ ಎಂತಹ ಪಟ್ಟಣದಲ್ಲಿ ಹೋಗುವ ಆಜ್ಞೆ ಆಗಿದೆ ಎಂದರೆ ಅದು ಎಲ್ಲಾ ಪಟ್ಟಣಗಳನ್ನು ನುಂಗಿಹಾಕುವುದು. ಅದನ್ನು ಯಸ್ರಬ್ ಎನ್ನುತ್ತಾರೆ. ಆ ಪಟ್ಟಣ ಮದೀನ ಆಗಿದೆ. ಅದು ಪಾಪಿ ಜನರನ್ನು ತ್ಯಾಜ್ಯ ವಸ್ತುಗಳಂತೆ ತೆಗೆದು ಹಾಕುವುದು, ಅಗ್ನಿಯಲ್ಲಿ ತಪಿಸುತ್ತಿರುವ ಕಬ್ಬಿಣದಿಂದ ಕಲ್ಮಶಗಳನ್ನು ಸುಟ್ಟು ಹಾಕುವಂತೆ.

**ಟಿಪ್ಪಣಿ:** ಹಝ್ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿಯಲ್ಲ ಶಾಹ್ ಸಾಹಿಬ್ ಅದರ ವ್ಯಾಖ್ಯಾನದಲ್ಲಿ ಬರೆಯುತ್ತಾರೆ. ಮದೀನದ ಪಾವಿತ್ರ್ಯತೆ ದುಷ್ಕರ್ಮಿ ಜನರು ದೂರವಾದ ನಂತರವೇ ಉಳಿಯಲು ಸಾಧ್ಯವಿತ್ತು. ಈ ಘಟನೆಗಳು ಹಝ್ರತ್ ರಸೂಲುಲ್ಲಾಹ್(ಸ) ರವರ ಈ ಹೇಳಿಕೆಯನ್ನು ಅಕ್ಷರಶಃ ಸತ್ಯವೆಂದು ಸಾಬೀತುಗೊಳಿಸಿದೆ. ಯಹೂದಿ ಸಮುದಾಯದವರು ಒಡಂಬಡಿಕೆಯನ್ನು ಮುರಿದು ಹಾಕಿದರು ಮತ್ತು ಹೊರಗಿನ ಶತ್ರುಗಳೊಂದಿಗೆ ಸೇರಿ ಒಳಸಂಚು ಮಾಡಿಕೊಂಡು ಮದೀನ ಮೇಲೆ ಹಲ್ಲೆ ನಡೆಸಿದರು. ಅಂತಿಮವಾಗಿ ತನ್ನ ವಿದ್ರೋಹದಿಂದಾಗಿ ಒಬ್ಬರ ನಂತರ ಇನ್ನೊಬ್ಬರು ಮದೀನದಿಂದ ಹೊರಹಾಕಲ್ಪಟ್ಟರು. ಹಝ್ರತ್ ರಸೂಲುಲ್ಲಾಹ್(ಸ) ರವರ ಹೇಳಿಕೆಯ ಇನ್ನೊಂದು ಭಾಗ ಪೂರ್ತಿಯಾದದ್ದು ಯಾವಾಗ ಎಂದರೆ ಮದೀನವನ್ನು ಇಸ್ಲಾಮಿನ ಮೊದಲ ಕೇಂದ್ರವಾಗಿ ಮಾರ್ಪಟ್ಟಿತು. ಖಲಿಫ ರಾಶಿದಾದ ಪವಿತ್ರ ಕಾಲಾವಧಿಗಳಲ್ಲಿ ಮಹೋನ್ನತವಾದ ವಿಜಯಗಳು ದೊರೆತವು. ಇತರ ಪಟ್ಟಣಗಳನ್ನು ನುಂಗುವುದರ ಅರ್ಥ ಇತರ ಪಟ್ಟಣಗಳ ಮೇಲೆ ವಿಜಯ ಸಾಧಿಸುವುದು ಎಂದಾಗಿದೆ. **(ಸಹೀ ಬುಖಾರಿ ಸಂ 3, ಕಿತಾಬ್ ಫಝಾಯಿಲುಲ್ ಮದೀನ 2008)**

ಅಲ್ಲಾಹನೊಂದಿಗೆ ಪ್ರವಾದಿಗಳ ಸಂಬಂಧ ಎಲ್ಲಿಗೆ ತಲುಪಿರುತ್ತದೆ ಎಂದರೆ ಅವರು ಅಲ್ಲಾಹನೊಂದಿಗೆ ಸಂಭಾಷಣೆ ನಡೆಸುವವರಾಗುತ್ತಾರೆ ಮತ್ತು ಅವನ ದಿವ್ಯವಾಣಿ ಪಡೆಯುತ್ತಾರೆ.

ಸಿದ್ದೀಖ್ ಆದವರು ನಿಷ್ಠೆಯಿಂದ ಎಲ್ಲ ಮಾರ್ಗಗಳಲ್ಲೂ ಪ್ರೀತಿಸುತ್ತಾರೆ ಮತ್ತು ನಿಷ್ಠೆಯನ್ನೇ ಬಯಸುತ್ತಾರೆ.

ಶಹೀದ್ ಆದ ಮನುಷ್ಯನ ವಿಶ್ವಾಸ ಎಷ್ಟೊಂದು ಪ್ರಬಲವಾಗಿರುತ್ತದೆಂದರೆ ಅವನು ತನ್ನ ಜೀವಾರ್ಪಣೆಗೂ ಅಂಜುವುದಿಲ್ಲ.

ಸ್ವಾಲಿಹೀನ್ (ಸಜ್ಜನರು) ರವರಲ್ಲಿ ಯಾವುದೇ ರೀತಿಯ ಆಧ್ಯಾತ್ಮಿಕ ರೋಗವಿರುವುದಿಲ್ಲ ಮತ್ತು ಅವರಲ್ಲಿ ಗೊಂದಲದ ವಿಷಯವೇ ಇರುವುದಿಲ್ಲ.

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

**ಇಹ್‌ದಿನಸ್ಸಿರಾತಲ್ ಮುಸ್ತಖೀಮ್** (ಅಲ್‌ಫಾತಿಹ್) ನಲ್ಲಿ ಅನ್‌ಅಮ್‌ತ ಅಲೈಹಿಮ್‌ನ ಮಾರ್ಗವನ್ನು ಬಯಸಲಾಗಿದೆ. ನಾನು ಎಷ್ಟೋ ಸಲ ಈ ಮಾತನ್ನು ವಿವರಿಸಿದ್ದೇನೆ. ಅದೇನೆಂದರೆ **ಅನ್‌ಅಮ್‌ತ ಅಲೈಹಿಮ್**‌ನಲ್ಲಿ ನಾಲ್ಕು ಗುಂಪುಗಳ ವಿವರವಿದೆ. ನಬಿ, ಸಿದ್ದೀಖ್, ಸ್ವಾಲಿಹ್. ಆದ್ದರಿಂದ ಒಬ್ಬ ಸತ್ಯವಿಶ್ವಾಸಿಯೂ ದುಆ ಮಾಡುವುದಾದರೆ ಅವರ ನೀತಿ, ಸ್ವಭಾವ ಮತ್ತು ಜ್ಞಾನಕ್ಕಾಗಿ ದುಆ ಮಾಡುತ್ತಾನೆ. ಅದಾಗ್ಯೂ ಆ ನಾಲ್ಕು ಗುಂಪುಗಳ ನೀತಿ ಪಡೆಯುದಿಲ್ಲವಾದರೆ ಈ ದುಆ ಅವನಿಗೆ ಫಲ ನೀಡದು. ಅದು ಕೇವಲ ನಿರ್ಜನ ಪದಗಳ ಜಾನುವಾರಿನಂತಾಗುವನು. ಈ ನಾಲ್ಕು ವರ್ಗಗಳು ಯಾವ ಜನರದ್ದಾಗಿವೆ ಎಂದರೆ ಅವರು ಅಲ್ಲಾಹನಿಂದ ದಿವ್ಯಜ್ಞಾನ ಮತ್ತು ಉನ್ನತ ಸ್ಥಾನಗಳನ್ನು ಪಡೆದವರಾಗಿರುತ್ತಾರೆ. ಪ್ರವಾದಿಗಳ ಅಲ್ಲಾಹನೊಂದಿಗಿನ ಸಂಬಂಧ ಎಷ್ಟರಮಟ್ಟಿಗೆ ತಲುಪಿರುತ್ತದೆ ಎಂದರೆ ಅವರು ಅಲ್ಲಾಹನೊಂದಿಗೆ ಸಂಭಾಷಣೆ ನಡೆಸುವವರಾಗಿರುತ್ತಾರೆ ಮತ್ತು ಅವನ ದಿವ್ಯವಾಣಿ ಪಡೆಯುತ್ತಾರೆ. ಸಿದ್ದೀಖ್ ಆದವರು ನಿಷ್ಠೆಯಿಂದ ಎಲ್ಲ ಮಾರ್ಗಗಳಲ್ಲೂ ಪ್ರೀತಿಸುತ್ತಾರೆ ಮತ್ತು ನಿಷ್ಠೆಯೇ ಬಯಸುತ್ತಾರೆ. ಎಲ್ಲರಿಗಿಂತ ಶ್ರೇಷ್ಠ ನಿಷ್ಠೆ **"ಲಾ ಇಲಾಹ ಇಲ್ಲಲ್ಲಾಹ್"** ಆಗಿದೆ ಮತ್ತು ಎರಡನೆಯದಾಗಿ **ಮುಹಮ್ಮದ್ ರಸೂಲುಲ್ಲಾಹ್** ಆಗಿದೆ. ಅವರು ನಿದ್ದೆಯ ಎಲ್ಲ ಮಾರ್ಗಗಳನ್ನು ಪ್ರೀತಿಸುತ್ತಾರೆ ಮತ್ತು ನಿಷ್ಠೆಯೇ ಬಯಸುತ್ತಾರೆ. ಮೂರನೆಯದಾಗಿ ಶಹೀದರು ಇದ್ದಾರೆ. ಅವರು ಒಂದು ಅರ್ಥದಲ್ಲಿ ಅಲ್ಲಾಹನನ್ನು ವೀಕ್ಷಿಸುತ್ತಾರೆ. ಶಹೀದ್ ಎಂದರೆ ಕೇವಲ ವಧಿಸಲ್ಪಟ್ಟವನಲ್ಲ, ಯಾವುದೇ ಯುದ್ಧದಲ್ಲಿ ಅಥವಾ ಸಾಂಕ್ರಾಮಿಕ ರೋಗದಿಂದ ಮರಣ ಹೊಂದುವುದು ಕೂಡ, ಬದಲಾಗಿ ಶಹೀದ್ ಆದ ಮನುಷ್ಯನ ವಿಶ್ವಾಸ ಎಷ್ಟೊಂದು ಪ್ರಬಲವಾಗಿರುತ್ತದೆಂದರೆ ಅವನು ಅಲ್ಲಾಹನ ಮಾರ್ಗದಲ್ಲಿ ಜೀವರ್ಪಣೆ ಮಾಡಲು ಸಹ ಹಿಂಜರಿಯುವುದಿಲ್ಲ. ಸ್ವಾಲಿಹೀನ್ (ಸಜ್ಜನರು) ಎಂದರೆ ಅವರಿಂದ ಎಲ್ಲ ರೀತಿಯ ಗೊಂದಲಗಳು ದೂರವಾಗಿರುತ್ತವೆ. ಆರೋಗ್ಯವಂತ ಮನುಷ್ಯನ ನಾಲಿಗೆಯ ರುಚಿಯು ಸರಿಯಿದ್ದಂತೆ. ಪೂರ್ಣ ಸಮತೋಲಿತ ಮನುಷ್ಯನಿಗೆ ನಾಲಿಗೆಯು ರುಚಿ ಸರಿಯಿದ್ದಂತೆ ಪೂರ್ಣ ಸಮತೋಲನ ಹೊಂದಿದ ವ್ಯಕ್ತಿ ಆರೋಗ್ಯವಂತ ಎನಿಸಿಕೊಳ್ಳುತ್ತಾನೆ. ಅವರೊಳಗೆ ಯಾವುದೇ ರೀತಿಯ ಗೊಂದಲ ಇರುವುದಿಲ್ಲ. ಅವನ ಮಹಿಮೆ ಆತ್ಮಬಲಿದಾನದ ವೇಳೆ ವ್ಯಕ್ತವಾಗುತ್ತದೆ. ಶಹೀದ್, ಸಿದ್ದಿಖ್ ನಬಿಯ ಮಹಿಮೆ ಸಾಬೀತುಪಡಿಸುವಂತಿದೆ. ಶಹೀದ್ ನ ವಿಶ್ವಾಸ ಎಷ್ಟೊಂದು ಪ್ರಬಲವಾಗಿರುತ್ತದೆ ಎಂದರೆ ಅಲ್ಲಾಹನ ದರ್ಶನ ಪಡೆಯುವಂತಿರುತ್ತದೆ. ಸಿದ್ದೀಖ್ ಕ್ರಿಯೆರೂಪದಲ್ಲಿ ನಿಷ್ಠೆಯನ್ನು ಪ್ರೀತಿಸುತ್ತಾನೆ ಮತ್ತು ಸುಳ್ಳಿನಿಂದ ದೂರವಿರುತ್ತಾನೆ. ನಬಿಯ ಮಹಿಮೆ ಏನೆದರೆ ಅವರು ದೈವಿಕಾಶ್ರಮದಲ್ಲಿ ಬರುತ್ತಾರೆ. ಕೆಲವರು ಹೇಳುತ್ತಾರೆ. ಈ ಮಹಿಮೆ ಬೇರೆ ಯಾರಿಗೂ ದೊರೆಯುವುದಿಲ್ಲ. ಮೌಲ್ವಿ ಅಥವಾ ಮುಲ್ಲಾಗಳು ಹೇಳುತ್ತಾರೆ. ನಾಮಮಾತ್ರಕ್ಕೆ ತೋರಿಕೆ ರೂಪದಲ್ಲಿ ಕಲಿಮಾ ಪಠಿಸಿದರೆ, ನಮಾಝ್, ಉಪವಾಸಗಳ ಪಾಲನೆ ಮಾಡಿಕೊಂಡಿದ್ದರೆ ಸಾಕು. ಇದಕ್ಕಿಂತ ಹೆಚ್ಚು ಅದರಿಂದ ದೊರೆಯುವ ಫಲಗಳು ಮತ್ತು ಪರಿಣಾಮ ಯಾವುದೂ ಇಲ್ಲ, ಅದರಲ್ಲಿರುವ ವಾಸ್ತವವು ಏನೂ ಇಲ್ಲ. ಇದು ಬಹು ದೊಡ್ಡ ತಪ್ಪು ವಿಚಾರ ಮತ್ತು ದುರ್ಬಲ ವಿಶ್ವಸವಾಗಿದೆ. ಇಂಥವರು ಪ್ರವಾದಿತ್ವದ ಆಶಯವೇ ತಿಳಿದಿಲ್ಲ.

**(ಮಲ್ಫೂಝಾತ್, ಸಂಪುಟ-1, ಪುಟ-485, ಮುದ್ರಣ 2018 ಖಾದಿಯಾನ್)**

# "ಆ ದಿನಗಳು"

(ಹಝ್ರತ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್[ರ])

ಓ ಪ್ರಿಯರೇ! ಪ್ರತಿಯೊಬ್ಬ ಸತ್ಯವಂತನ ಮೇಲೆ ಅವನ ವಿಧಿ ತೀರ್ಮಾನಗೊಳ್ಳುವ ಆ ದಿನ ಬಂದೇ ಬರುತ್ತದೆ. ಅದರ ಹೆಸರು ಏನೆಂದು ಕರೆಯಬೇಕು. ನಾನು ಹೇಳಲಾರೆ. "ಆ ದಿನ" ಎಂಬ ಶೀರ್ಷಿಕೆ ನನಗೆ ಇನ್ಯಾವುದೇ ಶೀರ್ಷಿಕೆಯಿಂದ ಹೆಚ್ಚು ಇಷ್ಟವುಳ್ಳದ್ದಾಗಿದೆ. ಮುಂದೆ ಯಾರು ಏನೇ ಹೆಸರು ಕೊಟ್ಟರೂ ಮೊದಲಾಗಿ ಅವನು ಒಂದು ರೀತಿಯ ಅಂಧಕಾರದಲ್ಲಿರುತ್ತಾನೆ. ಅವನ ಆತ್ಮ ಅವನಿಗೆ ಆಗಾಗ ಜಾಗೃತಪಡಿಸುತ್ತಿರುತ್ತದೆ. ಅಲ್ಲಾಹನ ಗ್ರಂಥ, ಅವನ ಪ್ರವಾದಿ ಅವನನ್ನು ಪದೇ ಪದೇ ಜಾಗೃತರಾಗಲು ಪ್ರೇರಣೆ ನೀಡುತ್ತಿರುತ್ತದೆ ಮತ್ತು ಇನ್ನೊಂದೆಡೆ ವಿರೋಧಿ ಬಣ ತಮ್ಮ ಪೂರ್ಣ ಶಕ್ತಿ ಉಪಯೋಗಿಸುತ್ತಿರುತ್ತದೆ. ಅವನು ಬೀಳುತ್ತಾನೆ, ಮತ್ತೆ ಏಳುತ್ತಾನೆ, ಆತಂಕಗೊಳ್ಳುತ್ತಾನೆ ಮತ್ತು ಸುಧಾರಿಸಿಕೊಳ್ಳುತ್ತಾನೆ. ಅಧೀರನಾಗುತ್ತಾನೆ ಮತ್ತು ಧೈರ್ಯ ತಾಳುತ್ತಾನೆ. ಅಷ್ಟರಲ್ಲಿ ದೈವಿಕ ಶಕ್ತಿ ಮತ್ತು ದೈವಕೃಪೆ ಅವನ ಕೈ ಹಿಡಿಯುತ್ತದೆ. ದೀರ್ಘ ಅವಧಿಯ ಈ ಡೋಲಾಯಮಾನ ಸ್ಥಿತಿಯ ನಂತರ ಕೊನೆಗೆ ಒಂದು ದಿನ ಆಕಾಶದಿಂದ ಅವನಿಗೆ ಈ ಧ್ವನಿ ಕೇಳಿಬರುತ್ತದೆ. ಅಲಮ್ ಯಾನಿ ಲಿಧ್ಧಿಕ್ರಿಲ್ಲಾಹ್ ಅಂದಕೂಡಲೇ ಒಂದು ನಿರ್ಣಯ ಆಗಿ ಬಿಡುತ್ತದೆ. ಮಾನವನ ಆತ್ಮದಲ್ಲಿ ಒಂದು ಕೋಲಾಹಲ ಉಂಟಾಗುತ್ತದೆ. ಶೈತಾನ ಶಕ್ತಿಗಳು ದಯವಂತನಾದ ಪ್ರಭುವಿನ ತೇಜಸ್ಸಿನ ಮುಂದೆ ಸೋಲನ್ನು ಅನುಭವಿಸುತ್ತದೆ ಮತ್ತು ಅವನ ಪೈಕಿಯ ದೇವದೂತನು ಅವನ ಆತ್ಮದ ಕರ್ಮಗಳ ಪರೀಕ್ಷೆ ಆರಂಭಿಸುತ್ತಾನೆ ಮತ್ತು ಹೀಗೆ ಪ್ರಶ್ನೆಯನ್ನು ಕೇಳುವನು. ನೋಡು ಹೇ ದಾಸನೇ ನಿನ್ನ ಪ್ರಭು ತನ್ನಡೆ ಕರೆ ನೀಡುತ್ತಾನೆ. ಅವನಿಗೋಸ್ಕರ ಸದಾಕಾಲಕ್ಕಾಗಿ ಬಹುದೇವಾರಾಧನೆ ಸಾಕಾರಗಳಾಗಿ ಬಿಡಲು ತಯಾರಾಗುವನೇ? ಆಗ ಆತ್ಮದ ಆಳದಿಂದ ಉತ್ತರ ಬರುತ್ತದೆ: ಲಬ್ಬೈಕ್! ಹೌದು ನಾನು ಖಂಡಿತವಾಗಿಯೂ ತಯಾರಿದ್ದೇನೆ. ಮತ್ತು ಪ್ರಶ್ನೆ ಬರುತ್ತದೆ. ಕಷ್ಟದಲ್ಲಾಗಲಿ, ಸುಖದಲ್ಲಾಗಲಿ ಎಲ್ಲ ಕಷ್ಟ ಸುಖದಲ್ಲೂ, ಮಾನ ಅಪಮಾನದಲ್ಲೂ ತನ್ನ ಪ್ರಭುವಿನ ವಿಧೇಯನಾಗಲು ಪ್ರತಿಜ್ಞೆ ಮಾಡುವನೇ? ಉತ್ತರ ಬರುತ್ತದೆ: ಹೌದು, ಹೌದು, ಖಂಡಿತವಾಗಿಯೂ ಪ್ರತಿಜ್ಞೆ ಮಾಡುವೆನು.

ಮತ್ತೆ ಪ್ರಶ್ನೆ ಕೇಳುತ್ತಾರೆ. ನಿನ್ನ ಸಂಪತ್ತು, ಮರ್ಯಾದೆ ನಿನ್ನ ಕುಟುಂಬ ಸಂತಾನ ನಿನ್ನ ಸಂಬಂಧಿಕರು ಮತ್ತು ಇನ್ನ ಆಸ್ತಿಪಾಸ್ತಿ ನಿನ್ನ ಸಂಪತ್ತು, ನಿನ್ನ ವ್ಯಾಪಾರ, ನಿನ್ನ ನೌಕರಿ ಇತ್ಯಾದಿಯನ್ನು ಪ್ರಭುವಿನ ಮುಂದೆ ಪ್ರಧಾನ್ಯತೆ ನಿಡುವನೇ? ಉತ್ತರ ದೊರೆಯುತ್ತದೆ. ಖಂಡಿತ ಇಲ್ಲ. ಖಂಡಿತ ಇಲ್ಲ.

ಅದಾದ ನಂತರ ವಿವರವಾಗಿ ಸಮಸ್ಯೆಗಳು ಬಗೆಹರಿಸಲಾಗುತ್ತದೆ. ಉದಾಹರಣೆಯಾಗಿ ನಿನ್ನ ಹೆತ್ತವರು, ನಿನ್ನ ಹೆಂಡತಿ, ನಿನ್ನ ಮಕ್ಕಳು ಮತ್ತು ನಿನ್ನ ಮಿತ್ರರು ಈ ಮಾರ್ಗದಲ್ಲಿ ಅಡ್ಡ ಬಂದರೆ ಎಷ್ಟರಮಟಿಗೆ ಅವರ ಮಾತುಗಳನ್ನು ಒಪ್ಪಲು ಸಿದ್ಧವಿರುವೆ? ಉತ್ತರ : ನಾನು ಅವರೆನ್ನೆಲ್ಲ ಬಿಟ್ಟುಬಿಡುವೆನು ಮತ್ತು ಪ್ರಭುವಿನ ಸಂಪ್ರೀತಿಗಾಗಿ ಅವರನ್ನೆಲ್ಲ ತ್ಯಾಗ ಮಾಡಬೇಕಾದರೆ ತಡಮಾಡದೆ ತ್ಯಜಿಸುವೆನು. ನನ್ನ ಮುಂದೆ ಹಝ್ರತ್ ಇಬ್ರಾಹಿಂ(ಅ) ರವರ ಭವ್ಯವಾದ ತ್ಯಾಗದ ಮಾದರಿ ಉಪಸ್ಥಿತವಿಲ್ಲವೇ.

ಪ್ರಶ್ನೆ : ನಿನಗೆ ನಿನ್ನ ಸಂಪತ್ತು, ಆಸ್ತಿ ಅವನ ಮಾರ್ಗದಲ್ಲಿ ಕೊಡಬೇಕಾದರೆ?

ಉತ್ತರ : ಅದು ಈಗಲೇ ಉಪಸ್ಥಿತವಿದೆ. ಅವು ಮೊದಲು ನನ್ನದಾಗಿರಲಿಲ್ಲ. ಮುಂದೆಯೂ ಆಗಲಾರವು. ನನಗೆ ಹಸಿವಾಗಿರಲು, ಆಕಾಶದ ನೆರಳಿನಲ್ಲಿ ಜೀವಿಸುವುದು, ಬತ್ತಲೆಯಾಗಿರಲು, ಎಲ್ಲ ಕಷ್ಟ ಸುಖಗಳನ್ನು ಬಿಡಲು ಒಪ್ಪಿಗೆ ಇದೆ. ಆದರೆ ನಾನು ಯಾವ ಕಾರಣಕ್ಕೂ ನನ್ನ ಪ್ರಭುವನ್ನು ಬಿಡಲು ಸಾಧ್ಯವಿಲ್ಲ.

ಪ್ರಶ್ನೆ : ನಿನ್ನ ವ್ಯಾಪಾರ ಅಥವಾ ನೌಕರಿ ಅಥವಾ ಜೀವನ ಉಪಕ್ರಮಗಳಲ್ಲಿ ಅವನ ಮಾರ್ಗದಲ್ಲಿ ಆತಂಕ ಬಂದು ಒದಗಿದರೆ ಏನು ಮಾಡುವೆ?

ಉತ್ತರ : ಹಸಿವಿನಿಂದಲೇ ಬಿಕ್ಕಿ ಬಿಕ್ಕಿ ಪ್ರಾಣ ಕೊಡುವೆನು, ಭಿಕ್ಷೆ ಬೇಡಿ ಜೀವನ ಸಾಗಿಸುವೆನು, ಹುಲ್ಲು ಇತ್ಯಾದಿ ಭಕ್ಷಿಸುವೆನು. ಆದರೆ ಓ ನನ್ನ ಒಡೆಯನೇ ನಿನ್ನ ಮಡಿಲು ಬಿಡೆನು, ಬಿಡಲು ಸಾಧ್ಯವೂ ಇಲ್ಲ. ಶುಅಬ್ ಅಬಿ ತಾಲಿಬ್‌ನಲ್ಲಿ ಸಮೀಪ ಮೂರು ವರ್ಷದವರೆಗೆ ಬಹಿಷ್ಕಾರ ಹಾಕಿದಾಗ ಒಂದು ಪವಿತ್ರವಾದ ಜಮಾಅತ್ ಮಕಿಗಳ ಎಲೆಗಳನ್ನು ಮತ್ತು ಒಣಗಿದ ಚರ್ಮಗಳ ತುಂಡುಗಳನ್ನು ನೀರಿನಲ್ಲಿ ನೆನೆಸಿ ತನ್ನ ಹೊಟ್ಟೆ ತುಂಬಿಸಲಿಲ್ಲವೇ, ಅದು ಸತತ ಮೂರು ವರ್ಷಗಳ ದೀರ್ಘ ಅವಧಿಯವರೆಗೆ.

ಪ್ರಶ್ನೆ:- ಯಾವುದೇ ರೋಗ ಅಥವಾ ಕಷ್ಟಕಾಲ ದೈಹಿಕವಾಗಿ ಬಂದರೆ ದೂರು ಕೊಡುವೆಯಾ?

ಉತ್ತರ : ಎಂದೂ ಇಲ್ಲ, ವಯಸ್ಸು ಪೂರ್ತಿ ಈವೆಲ್ಲ ಆಪತ್ತುಗಳಲ್ಲಿ ಸುತ್ತುವರಿದರೂ ಮತ್ತು ಕಷ್ಟ ಅತಿ ಕಷ್ಟ ದು:ಖಗಳು ಬಂದರೂ, ಆಗಲೂ ಅಲ್ಲಾಹನ ಮಾಲೀಕತ್ವದ ಹಕ್ಕು ಮತ್ತು ಪ್ರೀತಿಸುವ ಹಕ್ಕು ನನ್ನ ಮೇಲಿದೆ. ನಾನು ಯಾವಾಗಲೂ ಸಹನೆ ಮತ್ತು ಕೃತಜ್ಞನಾಗಿರುವೆನು ಮತ್ತು ಎಂದ ದೂರವಿರಲಾರೆನು. ದೂರುವುದು ಒಂದು ಕಡೆ ಇರಲಿ, ಅವನ ಸಂಪ್ರೀತಿಗಾಗಿ ನನಗೆ ಸ್ವತ; ನನ್ನ ಕೈಗಳಿಂದ ತನ್ನ ಒಂದೊಂದು ಮಾಂಸದ ತುಂಡನ್ನು ಮತ್ತು ಒಂದೊಂದು ಈಗ ನರಗಳನ್ನು ಟೊಂಡಾದ ಕೈಂಚಿಯಿಂದ ಕತ್ತರಿಸಬೇಕಾದರೂ ನಾನು ಮನ:ಪೂರ್ವಕವಾಗಿ ಸಿದ್ಧನಾಗಿರುವೆನು, ನನಗೆ ಈ ಮಾತುಗಳಿಂದ ಸಂತೋಷವೇ ಆಗುವುದು ಹೊರತು ದು:ಖವಲ್ಲ. ಇದೇನು ನನಗಿಂತ ಮೊದಲು ನನ್ನಂತಹ ಮನುಷ್ಯರನ್ನು ಅಗಸದಿಂದ ಶಿರದಿಂದ ಹಿಡಿದು ಕಾಲುಗಳವರೆಗೆ ಸಿಡಿದ ಮಾರ್ಗ ತಿಳಿದಿಲ್ಲವೆ. ಧಗಧಗಿಸುತ್ತಿರುವ ಮರಳಿನಲ್ಲಿ ಧಗಧಗಿಸುತ್ತಿರುವ ಕಲ್ಲಿದ್ದಲ್ಲಿನ ಮೇಲೆ ಮಲಗಿಸಲಿಲ್ಲವೇ. ಕಲ್ಲು ಹೊಡೆದು ಸಾಯಿಸಲಿಲ್ಲವೇ. ಅವರ ಚರ್ಮಗಳನ್ನು ಸುಲಿಯಲಿಲ್ಲವೇ, ಜೀವಂತ ಸುಡಲಿಲ್ಲವೆ, ಅವರ ಕಣ್ಣುಗಳನ್ನು ತೆಗೆಯಲಿಲ್ಲವೆ, ಆದರೆ ಅವರು "ಉಫ್" ಸಹ ಹೇಳಲಿಲ್ಲ. ಅಲ್ಲಾಹನ ಅನುಗ್ರಹ ಅವರ ಮೇಲಿರಲಿ, ಅವರುಗಳು ಈ ಸಮಯ ನನಗಾಗಿ ದಾರಿದೀಪವಾಗಿದ್ದಾರೆ.

ಪ್ರಶ್ನೆ : ಮರ್ಯಾದೆ ಬಹು ದೊಡ್ಡ ಮಾತಾಗಿದೆ. ನೀನೇನು ಎಲ್ಲ ರೀತಿಯ ಅವಮಾನಗಳಿಗೆ ಸಿದ್ಧನಿದೆಯೇ?

ಉತ್ತರ: ಹೌದು! ಅವನ ಮಾರ್ಗದಲ್ಲಿ ನನಗೆ ಹೇಳಿದರೆ ಪೊರಕೆ ಹಿಡಿದು ಪೇಟೆಗಳೆಲ್ಲ ಸ್ವಚ್ಛಗೊಳಿಸು ಎಂದರೆ ನನಗೇನು ಅಭ್ಯಂತರವಿಲ್ಲ. ನಾನು ನಗರದ ಚೌಕಿನಲ್ಲಿ ಕುಳಿತವನಾದರೆ ಮತ್ತು ಎಲ್ಲ ಹೋಗುವವರು, ಬರುವವರು ನನ್ನ ಮೇಲೆ ಮಣ್ಣು ಸುರಿಸಿದರೂ ಅಥವಾ ನನ್ನ ಬಳಿಯಿಂದ ಹೋಗುವ ಪ್ರತಿಯೊಬ್ಬ ವ್ಯಕ್ತಿ ನನ್ನ ಮುಖದ ಮೇಲೆ ಉಗುಳಿ ಹೋದರೂ, ನನ್ನ ಒಡೆಯ ನನ್ನ ಪ್ರಭುವಿನ ಸಂತುಷ್ಟಿ ಇದರಲ್ಲಿಯೇ ಇದ್ದರೆ, ನಾನು ಈ ಎಲ್ಲ ಅವಮಾನಗಳಿಗೆ ಸಿದ್ಧನಿದ್ದೇನೆ. ಆಯುಸ್ಸು ಪೂರ್ತಿ ಮುಂಜಾನೆಯಿಂದ ಸಂಜೆಯವರೆಗೆ ನನ್ನ ಮುಖ ಎದುರಾಗಿ ಬೈದರೂ ನಾನು ಅವೆಲ್ಲ ಕೇಳಲು ಸಿದ್ಧನಿದ್ದೇನೆ. ಆದರೆ ನನ್ನ ಒಡೆಯ ನನ್ನ ಪ್ರಿಯ ಒಂದು ಕ್ಷಣಕ್ಕಾಗಿಯೂ ನನ್ನಿಂದ ದೂರವಾಗಿರುವುದು ನಾನು ಬಯಸುವುದಿಲ್ಲ. ನನಗಿಂತ ಮೊದಲು ಇಂತಹ ಜನರನ್ನು ನಾನು ನೋಡಲಿಲ್ಲವೆ. ಅವರ ಮೂಗಿನಲ್ಲಿ ಹಗ್ಗ ಹಾಕಿ ಪೇಟೆಗಳನ್ನೆಲ್ಲ ತಿರುಗಿಸಿ ಅವಮಾನಿಸಲಿಲ್ಲವೇ, ಅವರ ಶಿರದ ಮೇಲೆ ಮುಳ್ಳುಗಳ ಹರಿಬಿಟ್ಟು ಅವರ ಪವಿತ್ರವಾದ ಮುಖದ ಮೇಲೆ ಉಗುಳಲಿಲ್ಲವೇ, ಅವರ ಬೆನ್ನಿನ ಮೇಲೆ ಮತ್ತು ಕುತ್ತಿಗೆಯ ಮೇಲೆ ಜಾನುವಾರುಗಳ ಹೊಲಸು ತುಂಬಿದ ಚೀಲ ಮಸೀದಿಯ ಒಳಗೆ ಸಾಷ್ಟಾಂಗ ಎರಗುವ ಸಮಯ ಹಾಕಲಿಲ್ಲವೇ.

ಕೊನೆಯ ಪ್ರಶ್ನೆ: ಖಂಡಿತವಾಗಿಯು ಇವೆಲ್ಲವನ್ನೂ ಮಾಡಬಹುದು, ಆದರೆ ಅತ್ಯಂತ ಕಷ್ಟಕರವಾದ ಪರೀಕ್ಷೆಯು ಕಾಮ ಮತ್ತು ಅಭ್ಯಾಸಗಳು. ಇದರಲ್ಲಿ ನೀವು ಹೇಗೆ ಯಶಸ್ಸನ್ನು ಸಾಧಿಸುವಿರಿ?

ಉತ್ತರ: ನಿಜವಾಗಿಯೂ, ಕಾಮದ ಭಾವನೆಗಳು ತುಂಬಾ ಪ್ರಬಲವಾಗಿವೆ ಎಂದು ನಾನು ನಂಬುತ್ತೇನೆ, ಆದರೆ ಪ್ರತಿ ಯುಗದಲ್ಲೂ ಹಝ್ರತ್ ಯೂಸುಫ್(ಅ) ಅವರ ಮಾದರಿಯನ್ನು ಎಲ್ಲಾ ಕಾಲದಲ್ಲೂ ತೋರಿಸಲಿಲ್ಲವೇ? ಲಕ್ಷಾಂತರ ಹವ್ವಾದ ಪುತ್ರೀಯರು ಈಗಲೂ ಜಗತ್ತಿನಲ್ಲಿ ಇಲ್ಲವೇ? ಅವರ ಪಾವಿತ್ರ್ಯತೆಯ ಬಗ್ಗೆ ದೇವದೂತರು ಸಹ ಪ್ರತಿಜ್ಞೆ ಮಾಡುತ್ತಾರೆ, ಹೀಗಿರುವಾಗ ನಾನು ಪುರುಷನಾಗಿ ಹೆಣ್ಣಿಗಿಂತ ಕಡೆಯೇ. ಅಭ್ಯಾಸದ ವಿಷಯಕ್ಕೆ ಸಂಬಂಧಿಸಿದಂತೆ, ಬಲವಾದ ಅಭ್ಯಾಸಗಳನ್ನು ಮುರಿಯುವುದಕ್ಕಿಂತ ಪರ್ವತವನ್ನು ಮುರಿಯುವುದು ಸುಲಭವಾಗಿದೆ ಮತ್ತು ಹಳೆಯ ಕೆಟ್ಟ ಅಭ್ಯಾಸಗಳನ್ನು ತೊಡೆದುಹಾಕುವುದಕ್ಕಿಂತ ಒಂಟೆಗೆ ಸೂಜಿಯ ಕಣ್ಣಿನಲ್ಲಿ ಹೋಗುವುದು ಸುಲಭ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಾನು ಒಪ್ಪುತ್ತೇನೆ. ದಣಿವರಿಯಿಲ್ಲದೆ ಶ್ರಮಿಸುವುದನ್ನು ಮುಂದುವರಿಸಿ ಮತ್ತು ಎಲ್ಲಾ ಸಮಯದಲ್ಲೂ ನನ್ನ ಹೊಣೆಗಾರಿಕೆಯನ್ನು ಮುಂದುವರಿಸುಆದರೆ ಹಳೆಯ ಅಭ್ಯಾಸಗಳು ತ್ಯಜಿಸುವುದು ತುಂಬಾ ಕಠಿಣ ಆದರೂ ನಾನು ಪ್ರತಿಜ್ಞೆ ಮಾಡುವೆನು. ಅದನ್ನು ಬಿಡಲು ನಾನು ಎಲ್ಲ ಪ್ರಯತ್ನಗಳನ್ನು ಕೈಗೊಳ್ಳುವೆನು. ಎಲ್ಲಾ ಸಮಯ ತನ್ನ ಆತ್ಮಾವಲೋಕನ ಮಾಡುತ್ತಿರುವೆನು ಮತ್ತು ಸದಾ ಅಲ್ಲಾಹನೊಂದಿಗೆ ದುಆ ಮಾಡುತ್ತಿರುವೆನು ನಾನು ಬಲವಾಗಿ ನಂಬಿರುತ್ತೇನೆ. ಅವನು ನನಗೆ ಸಹಾಯ ನೀಡುವನು ಮತ್ತು ನನ್ನ ಪ್ರಯತ್ನಗಳಿಗೆ ಯಶಸ್ಸು ನೀಡುವನು.

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಮಕ್ಕಾದ ಅವಿಶ್ವಾಸಿಗಳು ಮುಸಲ್ಮಾನರ ಜತೆ ನಿತ್ಯ ಯುದ್ಧಕ್ಕೆ ನೆಪವನ್ನು ಹುಡುಕುತ್ತಿದ್ದುದನ್ನು ಈ ಸಿದ್ಧತೆಯಿಂದ ತಿಳಿಯಬಹುದು. ಇಲ್ಲದಿದ್ದರೆ, ವ್ಯಾಪಾರ ತಂಡವನ್ನು ಉಳಿಸುವ ಉದ್ದೇಶವಿದ್ದರೆ, ಈ ಸುದ್ದಿ ನೀಡಿದ್ದರಿಂದ ಅವರು ತಕ್ಷಣ ತಲುಪುತ್ತಿದ್ದರು. ಯಾರ ಕೈಗೆ ಯಾವ ಆಯುಧ ಲಭಿಸಿತು ಅದನ್ನು ಅವರು ತೆಗೆದುಕೊಂಡು ಹೋದರು, ಆದರೆ ಹೀಗೆ ಸಂಭವಿಸಲಿಲ್ಲ, ಬದಲಿಗೆ ಅವರು ತಂಡದ ಬದಲಿಗೆ ಯುದ್ಧಕ್ಕೆ ಸಿದ್ಧರಾದರು.

**ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರ ಅನುಗ್ರಹದಾಯಕ ಜೀವನ ಚರಿತ್ರೆಯ ಸಂದರ್ಭದಲ್ಲಿ ಬದ್ರ್ ಯುದ್ಧದ ಹಿನ್ನೆಲೆಯ ವಿವರಣೆ**

ಬದರ್ ಯುದ್ಧಕ್ಕು ಮುಂಚೆ ನಡೆದ ಕೆಲವು ಅನ್ಯ ಯುದ್ಧಗಳ ಪ್ರಸ್ತಾವನೆ

ಸರಿಯ ಉಬೈದ ಬಿನ್ ಹಾರಿಸ್(ರ) ನಲ್ಲಿ ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ)ರವರು ಇಸ್ಲಾಮಿನ ಚರಿತ್ರೆಯಲ್ಲಿ ಚಲಾಯಿಸಿದ ಮೊದಲ ಬಾಣವಾಗಿತ್ತು. ಅದರ ಹೆಗ್ಗಳಿಕೆ ಹಝ್ರತ್ ಸಅದ್‌ರಿಗೆ ಲಭಿಸಿತು.

ಹಿಜರೀ 2, ಸಫರ್ ತಿಂಗಳಲ್ಲಿ ಹಝ್ರತ್ ಪೈಗಂಬರ್(ಸ) 60 ಮುಹಾಜಿರರ ಜೊತೆಗೆ ಅಬ್‌ವಾ ಅಥವಾ ವದ್ದಾನಿನ ಕಡೆಗೆ ಹೋದರು.

ಸರ್ವಶಕ್ತನಾದ ಅಲ್ಲಾಹನು ಪರಿಶುದ್ಧ ತಿಂಗಳಾದ ರಜಬ್‌ನಲ್ಲಿ ಸರಿಯ ಅಬ್ದುಲ್ಲಾ ಜಹಶ್(ರ)ಗಾಗಿ ಸೂರತುಲ್ ಬಖರದ ಆಯತ್ 2013ಅನ್ನು ವಹೀ ಮುಖಾಂತರ ಅವತರಿಸಿ ಮುಸ್ಲಿಮರಿಗೆ ನೆಮ್ಮದಿ ನೀಡಿದನು.

ಬದರ್ ಯುದ್ಧದ ಬಗ್ಗೆ ಹಝ್ರತ್ ಪೈಗಂಬರ್(ಸ) ಅವರ ದೊಡ್ಡಮ್ಮರಾದ ಆತಿಕ ಬಿನ್ತ್ ಅಬ್ದುಲ್ ಮುತಲ್ಲಿಬ್ ಅವರ ವಿಸ್ಮಯಕರವಾದ ಸ್ವಪ್ನ ಅದು ನಂತರ ನಿಜವಾಗಿ ಸಂಭವಿಸಿತು

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೊರ್ಡ್, ಯು.ಕೆ ಯ **'ಮಸ್ಜಿದ್ ಇಸ್ಲಾಮಬಾದ್'** ನಿಂದ **09-06-2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಿಜ್ರತಿನ ಆರಂಭಿಕ ಸ್ಥಿತಿಗತಿಗಳು, ಬದ್ರ್ ಯುದ್ಧದ ಕಾರಣಗಳು, ಮಕ್ಕಾದ ಸತ್ಯನಿಷೇಧಿಗಳ ಕೃತ್ಯಗಳ ಎದುರಾಗಿ ಕಾರ್ಯಾಚರಣೆ ಮತ್ತು ಅವರ ಯೋಜನೆಗಳನ್ನು ತಡೆಯಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಮಾಡಿದ ಕಾರ್ಯಾಚರಣೆಗಳ ಕುರಿತು ಸ್ವಲ್ಪ ಪ್ರಸ್ತಾಪಿಸಲಾಗಿತ್ತು. ಬದ್ರ್ ಯುದ್ಧಕ್ಕೆ ಸ್ವಲ್ಪ ಮುಂಚೆ ಕೆಲವು ದಂಡಯಾತ್ರೆಗಳು ಮತ್ತು ಯುದ್ಧಗಳು ನಡೆದಿದ್ದುವು. ಅವುಗಳ ಸಂಕ್ಷೇಪವಾದ ಪ್ರಸ್ತಾಪ ಈಗ ಮೊದಲು ಮಾಡುವೆನು. ಅನಂತರ ಮಕ್ಕದ ಸತ್ಯನಿಷೇಧಿಗಳು ಯುದ್ಧಕ್ಕಾಗಿ ಮಾಡಿದ ಸಿದ್ಧತೆಗಳ ಸ್ವಲ್ಪ ಸ್ಥಿತಿಯನ್ನು ಕೂಡ ಹೇಳುವೆನು. ಇನ್‌ಶಾ ಅಲ್ಲಾಹ್.

ಸರಿಯ ಹಝ್ರತ್ ಹಂಝ: ಇದು ಹಝ್ರತ್ ಪೈಗಂಬರ್(ಸ) ಕಳುಹಿಸಿದ ಮೊದಲ ದಂಡಯಾತ್ರೆಯಾಗಿತ್ತು. ಅದು ಹಿಜರೀ ಒಂದು ರಮಝಾನ್ ತಿಂಗಳಲ್ಲಿ ನಡೆಯಿತು. ಇದನ್ನು ಸರಿಯ ಸೈಫುಲ್ ಬಹ್ರ್ ಎಂದೂ ಕರೆಯಲಾಗುತ್ತದೆ. ಅದರ ಧ್ವಜ ಬಿಳಿಯಾಗಿತ್ತು. ಅದನ್ನು ಹಝ್ರತ್ ಅಬೂ ಮರ್ಸದ್ ಗ಼ನವಿ(ರ) ಎತ್ತಿದ್ದರು. ಹಝ್ರತ್ ಪೈಗಂಬರ್(ಸ) ತನ್ನ ದೊಡ್ಡಪ್ಪರಾದ ಹಂಝ ಬಿನ್ ಅಬ್ದುಲ್ ಮುತಲ್ಲಿಬ್‌ರನ್ನು ಅದರ ಅಮೀರನ್ನಾಗಿ ಮಾಡಿದ್ದರು. ಅವರ ಜೊತೆಗೆ 30 ಮುಹಾಜಿರ್ ಸವಾರರು ಇದ್ದರು. ಈ ಜನರು ಈಸ್ ಪ್ರದೇಶದ ಕಡೆಗಳಿಂದ ಕೆಂಪು ಸಮುದ್ರದ ತೀರದ ತನಕ ಹೋದರು. ಖುರೈಶಿನ ಒಂದು ಸಂಘ ಅಬೂಜಹಲಿನ ನೇತೃತ್ವದಲ್ಲಿ ಬರುತಿತ್ತು. ಅದರ ಜೊತೆಗೆ ಮುಖಾಮುಖಿಯಾಯಿತು. ಇಲ್ಲಿ **ಝುನಾಬತುಲ್ ಈಸ್** ಎಂಬ ಹೆಸರಿನ ಒಂದು ಚಿಲುಮೆಯಿದೆ. ಅದರ ಸುತ್ತ ಕರೀಜಾಲಿ ಅಥವಾ ಬಾಬುಲ್ ಮರಗಳು ಹೇರಳವಾಗಿ ಇದ್ದುವು. ಆದ ಕಾರಣ ಆ ಪ್ರದೇಶಕ್ಕೆ ಈಸ್ ಎಂದು ಹೇಳಲಾಗುತ್ತದೆ. ಈಸ್ ಎಂದರೆ ಕರೀಜಾಲಿ ಮರ. ಇಲ್ಲಿ ಬನೂ ಗೋತ್ರ ಸುಲೈಂ ನೆಲೆಸಿತ್ತು. ಸಿರಿಯಗೆ ಹೋಗುವ ಖುರೈಶಿನ ವ್ಯಾಪಾರಿ ಸಂಘ ಇಲ್ಲಿಂದ ಸಾಗಿ ಹೋಗುತ್ತಿದ್ದರು. ಹೇಗಿದ್ದರೂ ಇರುಪಕ್ಷದವರು ಮುಖಾಮುಖಿಯಾದರು. ಯುದ್ಧ ನಡೆಯುವ ಸಾಧ್ಯತೆಯಿತ್ತು. ಆದರೆ ಗೋತ್ರದ ಒಬ್ಬ ಸರದಾರ ಹೇಗಾದರೂ ಯುದ್ಧ ನಡೆಯುವುದನ್ನು ತಡೆದು ನಿಲ್ಲಿಸಿದರು. ಹೀಗೆ ಇರುಪಕ್ಷದವರು ಮರಳಿ ಹೋದರು.

(ಅಟ್ಲಸ್ ಸೀರತ್ ನಬವಿ, ಪುಟ-193-194, ದಾರುಸ್ಸಲಾಮ್ ರಿಯಾಝ್ 1424ಹಿ)

ಮುಂದಿನದು ಸರಿಯು ಉಬೈದ ಬಿನ್ ಹಾರಿಸ್: ಈ ದಂಡಯಾತ್ರೆಯನ್ನು ಹಿಜರೀ ಒಂದರಲ್ಲಿ, ಶವ್ವಾಲ್ ತಿಂಗಳಲ್ಲಿ ಹಝ್ರತ್ ಪೈಗಂಬರ್(ಸ) ಹಝ್ರತ್ ಉಬೈದ ಬಿನ್ ಹಾರಿಸ್‌ರನ್ನು 60 ಮುಹಾಜಿರರ ಸೇನಾಧಿಪತಿಯನ್ನಾಗಿ ಮಾಡಿಕೊಂಡು ರಾಬಕಿನ ಸಮೀಪ ಸನಿಯತುಲ್ ಮರಾದ ಕಡೆಗೆ ಕಳುಹಿಸಿದರು. ಅಲ್ಲಿ ಅಬೂಸುಫ್‌ಯಾನ್ ಮತ್ತು ಇನ್ನೂರು ಸವಾರರರೊಂದಿಗೆ ಮುಖಾಮುಖಿಯಾಯಿತು. ಇರುಪಕ್ಷದ ಕಡೆಯಿಂದಲೂ ಕೆಲವು ಬಾಣಗಳನ್ನು ಚಲಾಯಿಸಲಾದುವು. ಆದರೆ ಯುದ್ಧ ನಡೆಯಲಿಲ್ಲ. ಹಝ್ರತ್ ಸಅದ್ ಬಿನ್ ವಖಾಸ್(ರ) ಆ ದಿನದಂದು ಮೊದಲ ಬಾಣವನ್ನು ಚಲಾಯಿಸಿದರು. ಇದಕ್ಕೆ ಮುಂಚೆ ಮುಸ್ಲಿಮರ ಮತ್ತು ಮುಶ್ರಿಕರ ನಡುವೆ ಬಾಣಗಳನ್ನು ಚಲಾಯಿಸಲಾಗಿರಲಿಲ್ಲ. ಹೀಗೆ ಇದು ಇಸ್ಲಾಮಿನ ಚರಿತ್ರೆಯಲ್ಲಿ ಚಲಾಯಿಸಿದ ಮೊದಲ ಬಾಣವಾಗಿತ್ತು. ಅದರ ಹೆಗ್ಗಳಿಕೆ ಹಝ್ರತ್ ಸಅದ್‌ರಿಗೆ ಲಭಿಸಿತು. ಅನಂತರ ಇರುಪಕ್ಷದವರು ಮರಳಿ ತಮ್ಮ ತಮ್ಮ ಪ್ರದೇಶಗಳಿಗೆ ಹೋದರು. ಸನಿಯತುಲ್ ಮರಾ ಮದೀನ ಮುನವ್ವರದಿಂದ 200 ಕಿಲೋಮೀಟರ್ ದೂರದಲ್ಲಿದೆ.

(ಅಟ್ಲಸ್ ಸೀರತ್ ನಬವಿ, ಪುಟ-196, ದಾರುಸ್ಸಲಾಮ್ ರಿಯಾಝ್ 1424ಹಿ)

ಮುಂದಿನದು ಸರಿಯ ಸಅದ್ ಬಿನ್ ಅಬೀ ವಖಾಸ್: ಈ ದಂಡಯಾತ್ರೆಯನ್ನು ಹಿಜರೀ ಒಂದು ಅಥವಾ ಎರಡರಲ್ಲಿ ಹಝ್ರತ್ ಪೈಗಂಬರ್(ಸ) ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ)ರನ್ನು 20 ಜನರ ಅಮೀರನ್ನಾಗಿ ಮಾಡಿಕೊಂಡು ಕಳುಹಿಸಿದರು. ಖ಼ರಾ ಕಣಿವೆಗಿಂತ ಮುಂದಕ್ಕೆ ಹೋಗಬೇಡಿರಿ ಎಂದು ಅವರು ಆಜ್ಞೆ ನೀಡಿದ್ದರು. ಈ ಸಂಘ ಕಾಲ್ನಡಿಗೆಯಾಗಿ ಹೋಗಿತು. ಹಗಲು ಸಮಯದಲ್ಲಿ ಅವಿತುಕೊಳ್ಳುತ್ತಿದ್ದರು ಮತ್ತು ರಾತ್ರಿ ಸಮಯದಲ್ಲಿ ಯಾತ್ರೆ ಮಾಡುತ್ತಿದ್ದರು. ಅವರು ಕೊನೆಗೆ ಖ಼ರಾರ್ ತನಕ ತಲುಪಿದರು. ಖುರೈಶಿನ ವ್ಯಾಪಾರಿ ತಂಡವನ್ನು ತಡೆಯುವುದು ಈ ಸಂಘದ ಉದ್ದೇಶವಾಗಿತ್ತು. ಆದರೆ ಈ ತುಕಡಿ ಖ಼ರಾರಿಗೆ ತಲುಪಿದಾಗ, ವ್ಯಾಪಾರಿ ತಂಡ ಒಂದು ದಿನ ಮೊದಲೇ ಅಲ್ಲಿಂದ ಹೊರಟು ಹೋಗಿದೆ ಎಂದು ತಿಳಿದುಬಂತು. ಹೀಗೆ ಯಾವುದೇ ಕದನ ನಡೆಯದೇ ಸಂಘ ಮರಳಿಬಂತು. ಖ಼ರಾರಿನ ಅರ್ಥ ಜೋರು ಸದ್ದು

ಮಾಡಿಕೊಂಡು ಹರಿಯುವ ನೀರು ಎಂದಾಗಿದೆ. ಖ಼ರಾರ್ ಎಂಬುದು ಹಿಜಾಝ಼ಿನ ಪ್ರದೇಶದಲ್ಲಿ ಜುಹ್ಫ಼ದ ಸಮೀಪವಿರುವ ಒಂದು ಜಾಗವಾಗಿದೆ.

(ಅಟ್ಲಸ್ ಸೀರತ್ ನಬವಿ, ಪುಟ–199, ದಾರುಸ್ಸಲಾಮ್ ರಿಯಾಝ಼್ 1424ಹಿ)

ಮುಂದಿನದು ವದ್ದಾನ್ ಅಥವಾ ಅಬ್ವ ಯುದ್ಧ. ಇದು ಹಿಜರೀ ಎರಡು ಸಫ಼ರ್ ತಿಂಗಳದ್ದಾಗಿದೆ. ಹಿಜರೀ 2, ಸಫ಼ರ್ ತಿಂಗಳಲ್ಲಿ ಹಝ಼್ರತ್ ಪೈಗಂಬರ್(ಸ) 60 ಮುಹಾಜಿರರ ಜೊತೆಗೆ ಅಬ್ವಾ ಅಥವಾ ವದ್ದಾನಿನ ಕಡೆಗೆ ಹೋದರು. ಚರಿತ್ರೆಗಾರ ಇಬ್ನು ಸಅದ್‌ರ ಪ್ರಕಾರ ಹಝ಼್ರತ್ ಪೈಗಂಬರ್(ಸ) ಸ್ವತಃ ಭಾಗವಹಿಸಿದ ಮೊದಲ ಯುದ್ಧವಾಗಿದೆ. ಹಝ಼್ರತ್ ಪೈಗಂಬರ್(ಸ) ಹಝ಼್ರತ್ ಸಅದ್ ಬಿನ್ ಉಬಾದರನ್ನು ಮದೀನದಲ್ಲಿ ತನ್ನ ಪ್ರತಿನಿಧಿಯನ್ನಾಗಿ ಮಾಡಿದರು. ಅವರು ಅಬ್ವಾದ ತನಕ ತಲುಪಿದರು. ಹಝ಼್ರತ್ ಪೈಗಂಬರ್(ಸ)ರ ಉದ್ದೇಶ ಖುರೈಶಿನ ವ್ಯಾಪಾರ ತಂಡವನ್ನು ತಡೆಯುವುದಾಗಿತ್ತು. ಆದರೆ ಅವರು ಹಝ಼್ರತ್ ಪೈಗಂಬರ್(ಸ) ಅಲ್ಲಿಗೆ ತಲುಪುವುದಕ್ಕೆ ಮುಂಚಿತವಾಗಿಯೇ ಅಲ್ಲಿಂದ ಹೊರಟು ಹೋಗಿದ್ದರು. ಅಲ್ಲಿ ಹಝ಼್ರತ್ ಪೈಗಂಬರ್(ಸ) ಬನೂ ಝ಼ುಮ್‌ರದ ಮುಖಂಡ ಮಗ಼್ಶೀ ಬಿನ್ ಅಮ್ರ್ ಝ಼ುಮ್‌ರಿಯ ಜೊತೆಗೆ ಸಂಧಾನದ ಒಪ್ಪಂದ ಮಾಡಿಕೊಂಡರು. ಒಪ್ಪಂದ ಹೀಗಿತ್ತು: ಹಝ಼್ರತ್ ಪೈಗಂಬರ್(ಸ) ಬನೂ ಝ಼ುಮ್‌ರದ ಮೇಲೆ ದಾಳಿ ಮಾಡಬಾರದು, ಅದೇ ರೀತಿಯಲ್ಲಿ ಬನೂ ಝ಼ುಮರ್‌ರ ಹಝ಼್ರತ್ ಪೈಗಂಬರ್(ಸ)ರ ವಿರುದ್ಧ ಯಾವುದೇ ಕಾರ್ಯಾಚರಣೆ ನಡೆಸದು. ಅವರ ವಿರುದ್ಧ ಇರುವ ಯಾವುದೇ ಕಾರ್ಯಾಚರಣೆಯಲ್ಲಿ ಭಾಗವಹಿಸದು. ಅವರ ಯಾವನೇ ಶತ್ರುವಿಗೆ ಸಹಾಯ ಮಾಡಬಾರದು. ಈ ಯಾತ್ರೆಯಲ್ಲಿ ಹಝ಼್ರತ್ ಪೈಗಂಬರ್(ಸ) ಮದೀನದಿಂದ 15 ದಿನಗಳು ಹೊರಗೆ ಇದ್ದರು. ವದ್ದಾನ್ ಎಂಬುದು ಮಕ್ಕ ಮತ್ತು ಮದೀನದ ಎಡೆಯಲ್ಲಿ ಇರುವ ಜಾಗವಾಗಿದೆ. ಅದು ಅಬ್ವದಿಂದ 13 ಕಿ.ಲೊ. ದೂರದಲ್ಲಿದೆ. ಅಲ್ಲಿ ಹಝ಼್ರತ್ ಪೈಗಂಬರ್(ಸ)ರ ತಾಯಿಯ ಖಬರ್ ಇದೆ. ಜುಹ್ಫ಼ದಿಂದ ಅದರ ದೂರ ಸುಮಾರು 13 ಕಿ.ಲೊ. ಇದೆ.

(ಅಟ್ಲಸ್ ಸೀರತ್ ನಬವಿ, ಪುಟ–202, ದಾರುಸ್ಸಲಾಮ್ ರಿಯಾಝ಼್ 1424ಹಿ)

ಈ ಜಾಗಗಳ ಹೆಸರುಗಳು ಮತ್ತು ಸಂಗತಿಗಳನ್ನು ನಾನು ಹೇಳುವುದಕ್ಕಿರುವ ಕಾರಣವೇನೆಂದರೆ, ಕೆಲವು ಅಹ್ಮದೀ ಯಾತ್ರಿಕರು ಉಮ್ರ ಮಾಡಲು ಹೋಗುತ್ತಾರೆ. ಚರಿತ್ರೆ ಗೊತ್ತಿರುವ ಕಾರಣ ಅಲ್ಲಿಗೂ ಹೋಗಲು ಬಯಸುತ್ತಾರೆ. ನಾನು ಹೇಳುವುದರಿಂದ ಆ ಜಾಗಗಳ ಕಿರುಪರಿಚಯವಾಗುತ್ತದೆ.

ಬವಾತ್ ಯುದ್ಧ: ಹಿಜರೀ 2, ರಬೀಉಲ್ ಅವ್ವಲ್ ತಿಂಗಳಲ್ಲಿ ಹಝ಼್ರತ್ ಪೈಗಂಬರ್(ಸ) ಹಝ಼್ರತ್ ಸಅದ್ ಬಿನ್ ಮುಆಝ಼್(ರ)ರನ್ನು ಮದೀನದ ಅಮೀರನ್ನಾಗಿ ಮಾಡಿಕೊಂಡು ತನ್ನ ಇನ್ನೂರು ಸಹಾಬಿಯರ ಜೊತೆಗೆ ಖುರೈಶಿನ ವ್ಯಾಪಾರಿ ತಂಡವನ್ನು ತಡೆಯಲಿಕ್ಕಾಗಿ ಹೊರಟರು. ಅವರ ವ್ಯಾಪಾರಿ ತಂಡದಲ್ಲಿ ಉಮಯ್ಯ ಬಿನ್ ಖ಼ಲ್‌ಫ಼್ ಸಹ ಇದ್ದರು ಮತ್ತು ಇತರ ನೂರು ಖುರೈಶಿಗಳು ಇದ್ದರು. 2500 ಒಂಟೆಗಳು ಇದ್ದುವು. ಹಝ಼್ರತ್ ಪೈಗಂಬರ್(ಸ) ರಝ಼್ವ ಆಸುಪಾಸಿನ ಬವಾತಿಗೆ ತಲುಪಿದರು. ಆದರೆ ಅಲ್ಲಿ ಯಾರನ್ನೂ ಎದುರಿಸಬೇಕಾಗಿ ಬರಲಿಲ್ಲ ಮತ್ತು ಹಝ಼್ರತ್ ಪೈಗಂಬರ್(ಸ) ಮದೀನಕ್ಕೆ ಮರಳಿದರು. ಈ ಯುದ್ಧದಲ್ಲಿ ಧ್ವಜದ ಬಣ್ಣ ಬಿಳಿಯಾಗಿತ್ತು. ಅದನ್ನು ಸಅದ್ ಬಿನ್ ಅಬೀ ವಖಾಸ್ ಎತ್ತಿಕೊಂಡಿದ್ದರು. ಮದೀನದಿಂದ ಬವಾತಿನ ದೂರ ಸುಮಾರು 100 ಕಿ.ಲೊ. ಆಗಿದೆ.

(ಅಟ್ಲಸ್ ಸೀರತ್ ನಬವಿ, ಪುಟ–204, ದಾರುಸ್ಸಲಾಮ್ ರಿಯಾಝ಼್ 1424ಹಿ)

ಉಶೈರ ಯುದ್ಧ: ಖುರೈಶಿನ ವ್ಯಾಪಾರಿ ತಂಡ ಮಕ್ಕದಿಂದ ಹೊರಟಿದೆ ಎಂದು ಹಝ಼್ರತ್ ಪೈಗಂಬರ್(ಸ)ರಿಗೆ ಮಾಹಿತಿ ಲಭಿಸಿತು. ಮಕ್ಕದವರು ಈ ವ್ಯಾಪಾರಿ ತಂಡಕ್ಕಾಗಿ ತಮ್ಮ ಎಲ್ಲ ಸಂಪತ್ತನ್ನು ಉಪಯೋಗಿಸಿದ್ದರು. ಇದರಲ್ಲಿ ಲಭಿಸುವ ಲಾಭದಿಂದ ಮುಸ್ಲಿಮರ ವಿರುದ್ಧ ಯುದ್ಧ ಮಾಡಲು ಉಪಯೋಗಿಸಲು ಹೀಗೆ ಮಾಡಿದ್ದರು. ಹಝ಼್ರತ್ ಪೈಗಂಬರ್(ಸ) ಹಿಜರೀ 2 ಜಮಾದಿಯುಲ್ ಊಲ ಅಥವಾ ಜಮಾದಿಉಲ್ ಸಾನಿಯದಲ್ಲಿ ಮದೀನದಿಂದ 150 ಅಥವಾ 200 ಜನರೊಂದಿಗೆ ಯಾತ್ರೆ ಹೊರಟರು. ಅವರು ಉಶೈರ ಎಂಬ ಸ್ಥಳಕ್ಕೆ ತಲುಪಿದಾಗ ಖುರೈಶಿನ ವ್ಯಾಪಾರಿ ತಂಡ ಅವರು ತಲುಪುದಕ್ಕೆ ಎರಡು ದಿನಗಳಿಗೆ ಮುಂಚಿತವಾಗಿಯೇ ಅಲ್ಲಿಂದ ಹೊರಟು ಹೋಗಿದ್ದರು. ಮಕ್ಕಾ ಮದೀನದ ನಡುವೆ ಇರುವ ಉಶೈರ ಎಂಬ ಜಾಗದಲ್ಲಿ ಹಝ಼್ರತ್ ಪೈಗಂಬರ್(ಸ) ಕೆಲವು ದಿನಗಳು ತಂಗಿದರು. ನಂತರ ಮದೀನಕ್ಕೆ ಮರಳಿ ಹೋದರು. ಮಕ್ಕದ ಖುರೈಶಿಗಳ ಈ ವ್ಯಾಪಾರಿ ತಂಡವು ಸಿರಿಯದಿಂದ ಮರಳಿ ಬರುವಾಗ ಹಝ಼್ರತ್ ಪೈಗಂಬರ್(ಸ) ಪುನಃ ಅದನ್ನು ಹಿಂಬಾಲಿಸಿದರು. ಹೀಗೆ ಬದ್ರ್ ಯುದ್ಧ ನಡೆಯಿತು.

(ಸಬ್ಲುಲ್ ಹುದಾ, ಸಂಪುಟ–4, ಪುಟ–17, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993) (ಫ಼ರ್ಹಂಗ್ ಸೀರತ್, ಪುಟ–201, ಝ಼ುವಾರಾ ಅಕಾಡಮಿ ಕರಾಚಿ 2003)

ಬದ್ರುಲ್ ಊಲ ಯುದ್ಧ: ಉಶೈರ ಯುದ್ಧದಿಂದ ಮದೀನಕ್ಕೆ ಮರಳಿ ಬಂದು ಹತ್ತು ದಿನಗಳು ಕೂಡ ಕಳೆದಿರಲಿಲ್ಲ. ಅಷ್ಟರಲ್ಲಿ ಕರ್‌ಝ಼್ ಬಿನ್ ಜಾಬಿರ್ ಮದೀನದ ಗದ್ದೆಗೆ ದಾಳಿ ನಡೆಸಿದನು. ಹಝ಼್ರತ್ ಪೈಗಂಬರ್(ಸ) ಅವನನ್ನು ಹಿಂಬಾಲಿಸಿದರು. ಹಝ಼್ರತ್ ಝ಼ೈದ್ ಬಿನ್ ಹಾರಿಸ(ರ)ರನ್ನು ತನ್ನ ಪ್ರತಿನಿಧಿಯನ್ನಾಗಿ ಮಾಡಿಕೊಂಡು ಹಝ಼್ರತ್ ಪೈಗಂಬರ್(ಸ) ಬದ್ರಿನ ಸಮೀಪ ಸಫ಼್ವಾನ್ ಎಂಬ ಹೆಸರಿನ ಕಣಿವೆಗೆ ತಲುಪಿದರು. ಸಫ಼್ವಾನ್ ಎಂಬುದು ಬದ್ರಿನ ಆಸುಪಾಸಿನ ಒಂದು ಕಣಿವೆಯಾಗಿದೆ. ಕರ್‌ಝ಼್ ಬಿನ್ ಜಾಬಿರ್ ಬೇಗನೇ ಮುಂದಕ್ಕೆ ಹೋಗಿಬಿಟ್ಟನು. ಅವರನ್ನು ಹಿಡಿಯಲಾಗಲಿಲ್ಲ. ಈ ಯುದ್ಧ ಕಾರ್ಯಾಚರಣೆಯನ್ನು ಗ಼ಝ಼್ವ ಬದ್ರುಲ್ ಊಲಾ ಎಂದೂ ಕರೆಯಲಾಗುತ್ತದೆ. ಇದರ ನಂತರ ಹಝ಼್ರತ್ ಪೈಗಂಬರ್(ಸ) ಮರಳಿ ಮದೀನಕ್ಕೆ ಹೋದರು. (ಸೀರತ್ ಇಬ್ನೆ ಹಿಶ್ಶಾಮ್, ಪುಟ–412, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ಅಟ್ಲಸ್ ಸೀರತ್ ನಬವಿ, ಪುಟ–206, ದಾರುಸ್ಸಲಾಮ್ ರಿಯಾಝ಼್ 1424ಹಿ)

ಹಝ಼್ರತ್ ಮಿರ್ಝಾ಼ ಬಶೀರ್ ಅಹ್ಮದ್ ಸಾಹಿಬ್(ರ) ಇದರ ಬಗ್ಗೆ ಹೀಗೆ ಬರೆದಿರುವರು: ಕರ್‌ಝ಼್ ಬಿನ್ ಜಾಬಿರಿನ ಈ ದಾಳಿ ಸಾಧಾರಣ ಗ್ರಾಮೀಣ ರೀತಿಯ ದಾಳಿಯಾಗಿರಲಿಲ್ಲ. ಬದಲಾಗಿ ಅವರು ನಿಶ್ಚಿತವಾಗಿಯೂ ಖುರೈಶಿನ ಕಡೆಯಿಂದ ಮುಸ್ಲಿಮರ ವಿರುದ್ಧ ವಿಶೇಷವಾದ ಉದ್ದೇಶದಿಂದ ಬಂದಿದ್ದನು. ವಿಶೇಷವಾಗಿ ಹಝ಼್ರತ್ ಪೈಗಂಬರ್(ಸ)ರನ್ನು ವಧಿಸಲಿಕ್ಕಾಗಿ ಬಂದಿರಬಹುದಾದ ಸಾಧ್ಯತೆಯೂ ಇದೆ. ಆದರೆ ಮುಸ್ಲಿಮರು ಹುಶಾರಾಗಿ ಇರುವುದನ್ನು ಕಂಡು ಕೇವಲ ಅವರ ಒಂಟೆಗಳನ್ನು ಕೊಳ್ಳೆಹೊಡೆದು ಹೊರಟುಹೋದನು. ಇದರಿಂದ ತಿಳಿದುಬರುವುದೇನೆಂದರೆ, ಮದೀನದ ಮೇಲೆ ದಾಳಿ ನಡೆಸಿಕೊಂಡು ಮುಸ್ಲಿಮರನ್ನು ಬಡೆದು ನಾಶ ಮಾಡಬೇಕೆಂದು ಮಕ್ಕದ ಖುರೈಶಿಗಳು ನಿರ್ಧಾರ ಮಾಡಿದ್ದರು. ನೆನಪಿಡಬೇಕಾದ ಮತ್ತೊಂದು ಸಂಗತಿಯೇನೆಂದರೆ, ಇದಕ್ಕಿಂತ ಮೊದಲೇ ಮುಸ್ಲಿಮರಿಗೆ ಖಡ್ಗದೊಂದಿಗೆ ಜಿಹಾದ್ ನಡೆಸಲು ಅನುಮತಿ ಲಭಿಸಿತ್ತು ಮತ್ತು ಅವರು ಸ್ವಯಂ ರಕ್ಷಣೆಯ ಉದ್ದೇಶದಿಂದ ಅದರ ಕುರಿತು ಆರಂಭಿಕ ಕಾರ್ಯಾಚರಣೆಗಳನ್ನು ಶುರುಮಾಡಿದ್ದರು. ಆದರೆ ಮುಸ್ಲಿಮರ ಕಡೆಯಿಂದ ಸತ್ಯನಿಷೇಧಿಗಳಿಗೆ ಯಾವುದೇ ವಿಧದ ಸಂಪತ್ತು ಅಥವಾ ಜೀವದ ನಷ್ಟ ಉಂಟಾಗಿರಲಿಲ್ಲ. ಆದರೆ ಕರ್‌ಝ಼್ ಬಿನ್ ಜಾಬಿರಿನ ದಾಳಿಯಿಂದ ಮುಸ್ಲಿಮರಿಗೆ ನಷ್ಟವುಂಟಾಯಿತು. ಹೀಗೆ ಮುಸ್ಲಿಮರು ಖುರೈಶಿಗಳ ಚಾಲೇಂಜನ್ನು ಸ್ವೀಕಾರ ಮಾಡಿದ ನಂತರವೂ ಯುದ್ಧ ಮಾಡುವುದರಲ್ಲಿ ಸತ್ಯನಿಷೇಧಿಗಳೇ ಮೊದಲು ಮಾಡಿದರು. (ಸೀರತ್ ಖಾತಮುನ್ನಬೀಈನ್, ಹಝ಼್ರತ್ ಸಾಹಿಬ್‌ಝಾ಼ದ ಮಿರ್ಝಾ಼ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ–330, 1996 ಮುದ್ರಣ)

ಮುಂದಿನದು ಸರಿಯ ಅಬ್ದುಲ್ಲಾಹ್ ಜಹಶ್(ರ): ಮಕ್ಕದ ಸಮೀಪ ನಖ಼್ಲ ಕಣಿವೆಯಲ್ಲಿ ಈ ದಂಡಯಾತ್ರೆ ನಡೆಯಿತು. ಹಝ಼್ರತ್ ಪೈಗಂಬರ್(ಸ) ರಜಬ್ ತಿಂಗಳಲ್ಲಿ ಹಝ಼್ರತ್ ಅಬ್ದುಲ್ಲಾಹ್ ಬಿನ್ ಜಹಶ್‌ರನ್ನು 8 ಮುಹಾಜಿರರ ಜೊತೆಗೆ ಕಳುಹಿಸಿದರು. ಅದರಲ್ಲಿ ಅನ್ಸಾರಿನ ಯಾವುದೇ ವ್ಯಕ್ತಿಗಳಿರಲಿಲ್ಲ. ಅವರಿಗೆ ಹಝ಼್ರತ್ ಪೈಗಂಬರ್(ಸ) ಒಂದು ಪತ್ರವನ್ನು ಬರೆದು ಕಳುಹಿಸಿದರು. ಈ ಪತ್ರವನ್ನು ಎರಡು ದಿನಗಳ ಯಾತ್ರೆ ಮುಗಿದ ನಂತರ ನೋಡಬೇಕು ಮತ್ತು ಅದರಲ್ಲಿ ಇರುವ ಆದೇಶದ ಪ್ರಕಾರ ನಡೆಯಬೇಕು ಎಂದು ಹೇಳಿದರು. ತನ್ನ ಯಾವುದೇ ಸಂಗಡಿಗನನ್ನು ತನ್ನ ಜೊತೆಗೆ ಬರಲು ಒತ್ತಾಯ ಪಡಿಸಬೇಡಿರಿ ಎಂದೂ ಹೇಳಿದರು. ಎರಡು ದಿನಗಳ ಯಾತ್ರೆಯ ನಂತರ ಹಝ಼್ರತ್ ಅಬ್ದುಲ್ಲಾಹ್ ಬಿನ್ ಜಹಶ್ ಆ ಆಜ್ಞಾಪನೆಯ ಪತ್ರವನ್ನು ತೆರೆದರು. ಅದರಲ್ಲಿ ಹೀಗೆ ಬರೆಯಲಾಗಿತ್ತು: ನೀವು ಈ ಪತ್ರವನ್ನು ಓದಿದ ನಂತರ ತಮ್ಮ ಯಾತ್ರೆಯನ್ನು ಮುಂದುವರೆಸಿರಿ. ತಾಯಿಫ಼್ ಮತ್ತು ಮಕ್ಕದ ರಸ್ತೆಯಲ್ಲಿ ಬರುವ ನಖ಼್ಲಗೆ ತಲುಪಿರಿ. ಅಲ್ಲಿ ಖುರೈಶಿಗಳ ಕಾರ್ಯಾಚರಣೆಗಳ ಮೇಲೆ ನಿಗಾ ಇರಿಸಿರಿ. ಅವರ ಸ್ಥಿತಿಗತಿಗಳ ಬಗ್ಗೆ ನಮಗೆ ತಿಳಿಸಿರಿ. ಹಝ಼್ರತ್ ಅಬ್ದುಲ್ಲಾಹ್ ಬಿನ್ ಜಹಶ್ ಈ ಪತ್ರವನ್ನು ಓದಿದ ನಂತರ ಹೀಗೆ ಹೇಳಿದರು: ಆಲಿಸುವುದು ಮತ್ತು ಅನುಸರಿಸುವುದು ನನ್ನ ಕಡ್ಡಾಯ ಕರ್ತವ್ಯವಾಗಿದೆ. ಆ ಪತ್ರವನ್ನು ತನ್ನ ಸಂಗಡಿಗರಿಗೂ ಓದಿ ಹೇಳಿಕೊಟ್ಟರು. ಅನಂತರ ಹೀಗೆ ಹೇಳಿದರು: ಯಾರು ಹುತಾತ್ಮರಾಗಲು ಬಯಸುತ್ತಾರೋ ಅವರು

ನನ್ನೊಡನೆ ನಡೆಯಿರಿ. ಯಾರು ಮರಳಿ ಹೋಗಲು ಬಯಸುತ್ತಾರೋ ಅವರು ಮರಳಿ ಹೋಗಿರಿ. ಆದರೆ ಅವರಲ್ಲಿ ಯಾರೂ ಮರಳಿ ಹೋಗಲಿಲ್ಲ. ಎಲ್ಲರೂ ಹಿಜಾಝಿನ ಕಡೆಗೆ ಹೊರಟರು. ಮಾರ್ಗದಲ್ಲಿ ಹಝ಼್ರತ್ ಸಅದ್ ಬಿನ್ ಅಬೀ ವಖಾಸ್(ರ) ಮತ್ತು ಹಝ಼್ರತ್ ಉತ್ಬ ಬಿನ್ ಗ಼ಝ಼್ವಾನ್(ರ)ರ ಒಂಟೆಗಳು ಕಾಣೆಯಾದುವು. ಅವರಿಬ್ಬರೂ ಒಂಟೆಗಳನ್ನು ಹುಡುಕಲು ಹೋದರು. ಹಝ಼್ರತ್ ಅಬ್ದುಲ್ಲಾಹ್ ಬಿನ್ ಜಹಶ್ ತನ್ನ ಇತರ ಸಂಗಡಿಗರೊಡನೆ ನಖ಼್ಲಗೆ ತಲುಪಿದರು. ಅಲ್ಲಿಂದ ಖುರೈಶಿನ ಒಂದು ವ್ಯಾಪಾರಿ ತಂಡ ದಾಟಿ ಹೋಯಿತು. ಆ ತಂಡವು ಕಶ್ಮಶ್ ಚರ್ಮಗಳು ಮತ್ತು ಖುರೈಶಿನ ವ್ಯಾಪಾರ ಸಾಮಾನುಗಳನ್ನು ಎತ್ತಿಕೊಂಡಿತ್ತು. ಈ ಸಂಘದಲ್ಲಿ ಅಮ್ರ್ ಬಿನ್ ಹಝ಼್ರಮಿ ಕೂಡ ಇದ್ದರು. ಮಕ್ಕದ ಖುರೈಶಿಗಳು ಮುಸ್ಲಿಮರನ್ನು ನೋಡಿದಾಗ ಭಯಗೊಂಡರು. ಹಝ಼್ರತ್ ಉಕಾಶ ಬಿನ್ ಮುಹ್‌ಸಿನ್ ಅವರ ಮುಂದೆ ಬಂದರು. ಅವರು ತನ್ನ ತಲೆಯನ್ನು ಬೋಳು ಮಾಡಿಕೊಂಡಿದ್ದರು. ಅವರನ್ನು ನೋಡಿ ಸತ್ಯನಿಷೇಧಿಗಳಿಗೆ ಸಮಾಧಾನವಾಯಿತು. ಭಯಪಡಬೇಕಾದ ಅಗತ್ಯವಿಲ್ಲ, ಅವರು ಉಮ್ರ ಮಾಡಲು ಹೋಗುತ್ತಿದ್ದಾರೆ ಎಂದು ಸತ್ಯನಿಷೇಧಿಗಳು ಹೇಳಿಕೊಂಡರು. ಮುಸ್ಲಿಮರು ಸಮಾಲೋಚನೆ ನಡೆಸಿಕೊಂಡು ಹೀಗೆ ಹೇಳಿದರು: ಇಂದು ರಜಬಿನ ಕೊನೆಯ ಉಪವಾಸವಾಗಿದೆ. ನಾವು ಸತ್ಯನಿಷೇಧಿಗಳೊಡನೆ ಯುದ್ಧ ಮಾಡಿದರೆ ಮತ್ತು ಅವರನ್ನು ವಧಿಸಿದರೆ, ಪರಿಶುದ್ಧ ತಿಂಗಳಾಗಿದೆ. ಇಂದು ಕಾಯುವುದಾದರೆ ಇಂದು ರಾತ್ರಿ ಸಮಯದಲ್ಲೇ ನಾವು ಪರಿಶುದ್ಧ ಕಅ್‌ಬದ ಪ್ರದೇಶವನ್ನು ತಲುಪುವೆವು. ನಂತರ ಏನೂ ಮಾಡಲಾಗದು. ಕೊನೆಗೆ ಅಂದೇ ಸತ್ಯನಿಷೇಧಿಗಳ ತಂಡದ ಮೇಲೆ ದಾಳಿ ನಡೆಸಲು ಎಲ್ಲರೂ ಒಮ್ಮತಾಭಿಪ್ರಾಯ ಹೊಂದಿಕೊಂಡರು. ಹಝ಼್ರತ್ ವಾಖಿದ್ ಬಿನ ಅಬ್ದುಲ್ಲಾಹ್ ತಮೀಮಿ ಒಂದು ಬಾಣವನ್ನು ಅಮ್ರ್ ಬಿನ್ ಹಝ಼್ರಮಿಯ ಕಡೆಗೆ ತೂರಿದರು. ಅದರಿಂದ ಅವರು ಕೊಲ್ಲಲ್ಪಟ್ಟರು. ಇಬ್ಬರನ್ನು ಮುಸ್ಲಿಮರು ಬಂಧಿಸಿದರು. ಒಬ್ಬರು ಪರಾರಿಯಾದರು. ಅನಂತರ ಹಝ಼್ರತ್ ಅಬ್ದುಲ್ಲಾಹ್ ಬಿನ್ ಜಹಶ್ ಒಂಟೆಗಳ ಮತ್ತು ಇಬ್ಬರು ಕೈದಿಗಳ ಜೊತೆಗೆ ಹಝ಼್ರತ್ ಪೈಗಂಬರ್(ಸ)ರ ಬಳಿ ಹಾಜರಾದರು. ಹಝ಼್ರತ್ ಅಬ್ದುಲ್ಲಾಹ್ ಬಿನ್ ಜಹಶ್ ಮದೀನಕ್ಕೆ ಬಂದಾಗ ಹಝ಼್ರತ್ ಪೈಗಂಬರ್(ಸ) ಅವರೊಡನೆ ಹೇಳಿದರು: ಪರಿಶುದ್ಧ ತಿಂಗಳಲ್ಲಿ ಯುದ್ಧ ಮಾಡಲು ನಾನು ನಿಮಗೆ ಆದೇಶ ನೀಡಿರಲಿಲ್ಲ. ಒಂಟೆಗಳನ್ನು ಮತ್ತು ಕೈದಿಗಳನ್ನು ಹಝ಼್ರತ್ ಪೈಗಂಬರ್(ಸ) ಸ್ವೀಕಾರ ಮಾಡಲಿಲ್ಲ. ಬೇರೆ ಯಾವುದನ್ನೂ ಸ್ವೀಕಾರ ಮಾಡಲಿಲ್ಲ.
(ಸೀರತ್ ಇಬ್ನೆ ಹಿಶ್ಶಾಮ್, ಪುಟ–412–414, ದಾರುಲ್ ಕುತುಬ್ ಇಲ್‌ಮಿಯಾ ಬೈರೂತ್ 2001)

ಸಂಪತ್ತು ಲೂಟಿ ಮಾಡುವುದು ಮುಸ್ಲಿಮರ ಉದ್ದೇಶವಾಗಿತ್ತು ಎಂದು ಆಕ್ಷೇಪಕರು ಹೇಳುತ್ತಾರೆ. ಅದು ಸರಿಯಲ್ಲ. ಅವರನ್ನು ಹೊಗಳಿ ನೀವು ಸರಿಯಾದ ಕೆಲಸವನ್ನು ಮಾಡಿದ್ದೀರಿ ಎಂದು ಹಝ಼್ರತ್ ಪೈಗಂಬರ್(ಸ) ಹೇಳಲಿಲ್ಲ. ನೀವು ತಪ್ಪು ಮಾಡಿದ್ದೀರಿ ಎಂದೇ ಹಝ಼್ರತ್ ಪೈಗಂಬರ್(ಸ) ಹೇಳಿದ್ದರು.

ಮುಸ್ಲಿಮರು ಪರಿಶುದ್ಧ ತಿಂಗಳ ಪರಿಶುದ್ಧಿಯನ್ನು ಮುರಿದಿರುವರು ಎಂದು ಖುರೈಶಿಗಳೂ ಗದ್ದಲ ಎಬ್ಬಿಸಿದರು. ವಧಿಸಲ್ಪಟ್ಟ ಅಮ್ರ್ ಬಿನ್ ಹಝ಼್ರಮಿ ಒಬ್ಬ ಸರದಾರನಾಗಿದ್ದನು. ಅವನು ಉತ್ಬ ಬಿನ್ ರಬೀಅರ ಮಿತ್ರನೂ ಆಗಿದ್ದನು. ಆದ್ದರಿಂದ ಈ ಘಟನೆಯು ಖುರೈಶಗಳ ಕೋಪವನ್ನು ವರ್ಧಿಸಿತು. ಅವರು ಮುಂಚೆಗಿಂತ ಹೆಚ್ಚು ಆವೇಶದಿಂದ ಮದೀನದ ಮೇಲೆ ದಾಳಿ ನಡೆಸಲು ತಯಾರಿ ಮಾಡಿಕೊಂಡರು. ಹೀಗೆ ಖುರೈಶಿಗಳ ಈ ತಯಾರಿ ಮತ್ತು ವೈರದ ಕಾರಣದಿಂದಲೇ ಬದ್ರ್ ಯುದ್ಧ ನಡೆದಿತ್ತು. ಘಟನೆಯ ಕುರಿತು ಮುಸ್ಲಿಮರು ಮತ್ತು ಸತ್ಯನಿಷೇಧಿಗಳು ಬಹಳಷ್ಟು ಮಾತುಗಳನ್ನು ಹೇಳುತ್ತಿದ್ದರು. ಕೊನೆಗೆ ಈ ಕುರಿತು ಪವಿತ್ರ ಖುರ್‌ಆನಿನ ವಹ್ಯ್ ಮುಸ್ಲಿಮರಿಗೆ ನೆಮ್ಮದಿ ನೀಡಿತು. ಅಲ್ಲಾಹನು ಹೇಳುತ್ತಾನೆ:

**ಅಊಝು ಬಿಲ್ಲಾಹಿ ಮಿನಶ್ಶೈತಾನ್ ನಿರ್‍ರಜೀಮ್– ಯಸ್‌ಅಲೂನಕ ಅನಿಶ್ಶಹ್‌ರಿಲ್ ಹರಾಮಿ ಖಿತಾಲಿನ್ ಫೀಹಿ; ಖುಲ್ ಖಿತಾಲುನ್ ಫೀಹಿ ಕಬೀರುಮ್; ವಸದ್ದು ಅನ್ ಸಬೀಲಿಲ್ಲಾಹಿ ವ ಕುಫ್‌ರುಮ್‌ಬಿಹೀ ವಲ್ ಮಸ್ಜಿದಿಲ್ ಹರಾಮಿ; ವ ಇಖ್‌ರಾಜು ಅಹ್‌ಲಿಹೀ ಮಿನ್‌ಹು ಅಕ್‌ಬರು ಇಂದಲ್ಲಾಹಿ, ವಲ್‌ಫಿತ್ನತು ಅಕ್ಬರು ಮಿನಲ್ ಖತ್ಲಿ, ವಲಾಯಝಾಲೂನ ಯುಖಾತೀಲೂನಕುಮ್ ಹತ್ತಾ ಯರುದ್ದೂಕುಮ್ ಅನ್ ದೀನಿಕುಮ್ ಇನಿಸ್ತತಾಊ** (ಅಲ್‌ಬಖರ: 218) ಅಂದರೆ ಆದರಣೀಯ ಮಾಸದ ಕುರಿತು ಅದರಲ್ಲಿ ಯುದ್ಧ ಮಾಡುವ ಬಗ್ಗೆ ಅವರು ನಿನ್ನೊಡನೆ ಕೇಳುತ್ತಾರೆ. ಹೇಳು: 'ಅದರಲ್ಲಿ ಯುದ್ಧ ಮಾಡುವುದು ಮಹಾ ಅಪರಾಧವಾಗಿದೆ. ಆದರೆ, ಅಲ್ಲಾಹನ ಮಾರ್ಗದಿಂದ (ಜನರನ್ನು) ತಡೆಯುವುದೂ ಅವನನ್ನು (ಅಲ್ಲಾಹನನ್ನು) ಹಾಗೂ ಮಸ್ಜಿದುಲ್ ಹರಾಮನ್ನು ನಿರಾಕರಿಸುವುದೂ ಅಲ್ಲಿನ ನಿವಾಸಿಗಳನ್ನು ಅಲ್ಲಿಂದ ಹೊರ ಅಟ್ಟುವುದೂ ಅಲ್ಲಾಹನ ದೃಷ್ಟಿಯಲ್ಲಿ (ಅದಕ್ಕಿಂತಲೂ) ಘೋರ ಅಪರಾಧವಾಗಿದೆ. ಫಿತ್ನ ಕೊಲೆಗಿಂತ ದೊಡ್ಡ ಅಪರಾಧವಾಗಿದೆ. 'ಅವರಿಗೆ ಸಾಧ್ಯವೆಂದಾದರೆ ನಿಮ್ಮ ಧರ್ಮದಿಂದ ನಿಮ್ಮನ್ನು ಮರಳಿಸುವ ವರೆಗೆ ಅವರು ನಿಮ್ಮೊಡನೆ ಯುದ್ಧ ಮಾಡುತ್ತಲೇ ಇರುವರು.

ಹೇಗಿದ್ದರೂ ಸತ್ಯನಿಷೇಧಿಗಳು ಮುಸ್ಲಿಮರನ್ನು ತನ್ನ ಧರ್ಮದಿಂದ ಮುಖ ತಿರುಗಿಸುವಂತೆ ಮಾಡಲು ಪ್ರಯತ್ನಿಸುವರು ಎಂದು ಅಲ್ಲಾಹನಿಗೆ ಗೊತ್ತಿತ್ತು.

"ಖುರೈಶಿನ ಮುಖಂಡರು ತಮ್ಮ ಕ್ರೂರವಾದ ಕಾರ್ಯಗಳನ್ನು ಪರಿಶುದ್ಧ ತಿಂಗಳಲ್ಲೂ ಮುಂದುವರೆಸಿದ್ದರು ಎಂದು ಚರಿತ್ರೆಯಿಂದ ಸಾಬೀತಾಗುತ್ತದೆ. ಪರಿಶುದ್ಧ ತಿಂಗಳಲ್ಲಿ ನಡೆಯುವ ಸಭೆಗಳು ಮತ್ತು ಯಾತ್ರೆಗಳಿಂದ ಪ್ರಯೋಜನ ಪಡೆಯುತ್ತಾ ಆ ತಿಂಗಳಲ್ಲಿ ತನ್ನ ಕಲಹಕಾರಿ ಕಾರ್ಯಗಳನ್ನು ಇನ್ನಷ್ಟು ಹೆಚ್ಚಿಗೆ ಮಾಡುತ್ತಿದ್ದರು. ಹೇಗಿದ್ದರೂ ಈ ದಿವ್ಯವಾಣಿಯಿಂದ ಮುಸ್ಲಿಮರಿಗೆ ಸಮಾಧಾನವಾಯಿತು. ಖುರೈಶಿಗಳ ಆವೇಶ ಸ್ವಲ್ಪ ತಣ್ಣಗಾಯಿತು. ಈ ವೇಳೆ ಇಬ್ಬರು ಕೈದಿಗಳನ್ನು ಬಿಡುಗಡೆಗೊಳಿಸಲಿಕ್ಕಾಗಿ ಖುರೈಶಿಗಳ ಜನರು ಮದೀನಕ್ಕೆ ಬಂದರು. ಆದರೆ ಅಷ್ಟರ ವರೆಗೂ ಸಅದ್ ಬಿನ್ ಅಬೀ ವಖಾಸ್ ಮತ್ತು ಉತ್ಬ ಮರಳಿ ಬಂದಿರಲಿಲ್ಲ. ಅವರು ಖುರೈಶಿಗಳ ಕೈಗೆ ಸಿಕ್ಕರೆ ಅವರನ್ನು ಜೀವಂತವಾಗಿ ಅವರು ಬಿಡಲಿಕ್ಕಿಲ್ಲ ಎಂಬ ಕಳವಳ ಹಝ಼್ರತ್ ಪೈಗಂಬರ್(ಸ)ರಿಗೆ ಇತ್ತು. ಆದ್ದರಿಂದ ಅವರು ಮರಳಿ ಬರುವ ತನಕ ಕೈದಿಗಳನ್ನು ಬಿಡುಗಡೆಗೊಳಿಸುವುದನ್ನು ನಿರಾಕರಿಸಿ ಕೊಂಡರು. ಅವರಿಬ್ಬರೂ ಮರಳಿ ತಲುಪಿದಾಗ ಹಝ಼್ರತ್ ಪೈಗಂಬರ್(ಸ) ಪರಿಹಾರ ಧನವನ್ನು ಪಡೆದುಕೊಂಡು ಇಬ್ಬರು ಕೈದಿಗಳನ್ನು ಬಿಡುಗಡೆಗೊಳಿಸಿದರು." (ಸೀರತ್ ಖಾತಮುನ್ನಬೀಈನ್(ಸ), ಸಾಹಿಬ್‌ಝಾದ ಹಝ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ–332–334)

ಬದ್ರುಲ್ ಕುಬ್ರ ಯುದ್ಧ: ಈ ಯುದ್ಧವನ್ನು ಪವಿತ್ರ ಖುರ್‌ಆನ್ ಯೌಮುಲ್ ಫುರ್ಖಾನ್ ಎಂದು ಹೇಳಿದೆ. ಹಝ಼್ರತ್ ಖ಼ಲೀಫತುಲ್ ಮಸೀಹ್ ಅವ್ವಲ್(ರ) ಹೇಳುತ್ತಾರೆ: ಹಝ಼್ರತ್ ಪೈಗಂಬರ್(ಸ)ರ ಫುರ್ಖಾನ್ (ಸತ್ಯ ಮತ್ತು ಅಸತ್ಯವನ್ನು ಬೇರ್ಪಡಿಸಿ ತೋರಿಸುವ ದಿನ) ಬದ್ರ್ ಯುದ್ಧದ ದಿನದಂದು ಆಗಿತ್ತು. ಆ ದಿನದಂದು ವಿರೋಧಿಗಳ ಶಕ್ತಿಶಾಲಿ ಮುಖಂಡರು ನಾಶವಾದರು ಹಾಗೂ ಮುಸ್ಲಿಮರಿಗೆ ವಿಜಯ ಮತ್ತು ಮೇಲುಗೈ ಲಭಿಸಿತು. (ಹಖಾಎಖುಲ್ ಫುರ್ಖಾನ್, ಸಂಪುಟ–3, ಪುಟ–235)

ಫುರ್ಖಾನ್ ಪದದ ಅರ್ಥವನ್ನು ಹಝ಼್ರತ್ ಖ಼ಲೀಫತುಲ್ ಮಸೀಹ್ ಅವ್ವಲ್(ರ) ಮತ್ತೊಂದೆಡೆ ಹೀಗೆ ಹೇಳುತ್ತಾರೆ: ಪವಿತ್ರ ಖುರ್‌ಆನಿನಿಂದ ನನಗೆ ತಿಳಿದುಬಂದ ಅರ್ಥವೇನೆಂದರೆ, ಶತ್ರುಗಳ ಸೊಂಟ ಮುರಿದು ಹೋಗುವಂತಹ ವಿಜಯವನ್ನು ಫುರ್ಖಾನ್ ಎಂದು ಹೇಳಲಾಗುತ್ತದೆ. ಅದು ಬದ್ರಿನ ದಿನವಾಗಿತ್ತು. (ಹಖಾಎಖುಲ್ ಫುರ್ಖಾನ್, ಸಂಪುಟ–1, ಪುಟ–306)

ಈ ಯುದ್ಧವನ್ನು ಬದ್ರ್ ಸಾನಿಯ, ಬದ್ರುಲ್ ಕುಬ್ರ, ಬದ್ರುಲ್ ಉಝ಼್ಮ ಮತ್ತು ಬದ್ರುಲ್ ಖಿತಾಲ್ ಎಂದೂ ಕರೆಯಲಾಗುತ್ತದೆ.
(ಅಸ್ಸೀರತುಲ್ ಹಲಬೀಯ, ಸಂಪುಟ–02, ಪುಟ–197, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) (ತಾರೀಖ್ ಅಬ್ನೆ ಖುಲ್ದೂನ್, ಭಾಗ–2, ಪುಟ–426, ದಾರುಲ್ ಫಿಕರ್ ಬೈರೂತ್ 2000)

ಖುರೈಶಿನ ಒಂದು ವ್ಯಾಪಾರ ತಂಡದೊಂದಿಗೆ ಅಬೂಸುಫ್‌ಯಾನ್ ಮರಳಿ ಬರುತ್ತಿದ್ದಾನೆ ಎಂಬ ಮಾಹಿತಿ ಹಝ಼್ರತ್ ಪೈಗಂಬರ್(ಸ)ರಿಗೆ ಲಭಿಸಿತು. ಅದರಲ್ಲಿ ಒಂದು ಸಾವಿರ ಒಂಟೆಗಳು ಮತ್ತು ಖುರೈಶಿಗಳ ಬಹಳ ದೊಡ್ಡ ಬಂಡವಾಳವಿತ್ತು ಹಾಗೂ 30, 40 ಅಥವಾ 70 ಜನರಿದ್ದರು. ಅದನ್ನು ಹಿಂಬಾಲಿಸಲಿಕ್ಕಾಗಿ ಹಝ಼್ರತ್ ಪೈಗಂಬರ್(ಸ) ಮುಂಚೆಯೂ ಹೊರಟಿದ್ದರು ಮತ್ತು ಉಶೈರ ಎಂಬ ಸ್ಥಳಕ್ಕೆ ತಲುಪಿದರು ಆದರೆ ಇದೇ ಕಾರವಾನ್ ಅನ್ವೇಷಣೆಯಲ್ಲಿ ಹಝ್‌ರತ್ ಪೈಗಂಬರರ(ಸ) ಮೊದಲು ಹೊರಟು ಉಷೈರಾ ಸ್ಥಳವನ್ನು ತಲುಪಿದ್ದರು, ಆದರೆ ಈ ತಂಡವು ಸೀರಿಯಾದ ಕಡೆಗೆ ಹೋಗಿತ್ತು. ಈ ಯುದ್ಧ ಕಾರ್ಯಾಚರಣೆಗಾಗಿ ಹಝ಼್ರತ್ ಪೈಗಂಬರ್(ಸ) ಹಿಜ್‌ರಿ 2, ಜಮಾದಿಯುಲ್ ಊಲ ಅಥವಾ ಜಮಾದಿಯುಲ್ ಆಖ಼ಿರ್ ತಿಂಗಳಲ್ಲಿ ಹೊರಟರು.

ರಸೂಲುಲ್ಲಾಹ್(ಸ) ರವರು ಈ ತಂಡವು ಹಿಂದಿರುಗಿದ ಸುದ್ದಿಯನ್ನು ಲಭಿಸಿದಾಗ ಮುಸ್ಲಿಮರನ್ನು ತಮ್ಮೊಂದಿಗೆ ಹೋಗಲು ಆಹ್ವಾನಿಸುತ್ತ ಹೀಗೆ ಹೇಳಿದರು ಇದು ಖುರೈಶರ ವ್ಯಾಪರ ತಂಡವಾಗಿದೆ ಇದರಲ್ಲಿ ಅವರ ಸಂಪತ್ತು ಇದೆ. ಆದ್ದರಿಂದ ನೀವು ಹೊರಹೋಗಿ, ಬಹುಶಃ

ಅಲ್ಲಾಹನು ನಿಮಗೆ (ಮಾಲೆ ಗನೀಮತ್) ಯುದ್ಧದಲ್ಲಿ ಗಳಿಸಿದ ಸಂಪತ್ತನ್ನು ನೀಡುತ್ತಾನೆ. (ಸಬ್ಲುಲ್ ಹುದಾ, ಸಂಪುಟ-4, ಪುಟ-30, ಮೌಲಾನ ಉಬೈದುರ್ರಹ್ಮಾನ್, ಲಾಹೋರ್) (ಅರ್ರಹೀಖುಲ್ ಮಖ್ತೂಮ್ ಉರ್ದು, ಪುಟ-272, ಅಲ್‌ಮಕ್ತಬತುಸ್ಸಲಫೀಯ ಲಾಹೋರ್ 2000)

ಕೇವಲ ಆಕ್ಷೇಪಿಸುವ ಅವಕಾಶವನ್ನು ಕಂಡುಕೊಳ್ಳುವ ಅಥವಾ ಕಡಿಮೆ ಜ್ಞಾನವಿರುವ ಕೆಲವರು, ಮುಸ್ಲಿಮರು ಮದೀನಕ್ಕೆ ಹೋಗಿ ಲೂಟಿ ಮಾಡಲು ಪ್ರಾರಂಭಿಸಿದರು ಎಂದು ಆಕ್ಷೇಪಿಸುತ್ತಾರೆ. ಅವರು ಅದೇ ತಂಡ್‌ನ್ನು ಹಿಂಬಾಲಿಸಿದರು ಎಂದು ಉದಾಹರಣೆಯನ್ನು ನೀಡುತ್ತಾರೆ. ಇದು ಸಂಪೂರ್ಣ ಅಜ್ಞಾನದ ವಿಷಯ ಮತ್ತು ಅಂದಿನ ಯುದ್ಧದ ಪರಿಸ್ಥಿತಿಗಳ ಅಜ್ಞಾನದ ಪರಿಣಾಮವಾಗಿದೆ, ಏಕೆಂದರೆ ಖುರೈಷಿಗಳ ಈ ವ್ಯಾಪಾರ ತಂಎವನ್ನು ತಡೆಯುವುದು ಆಕ್ಷೇಪಾರ್ಹ ವಿಷಯವಲ್ಲ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಸೀರತ್ ಖಾತಮನ್ನಬೀಈನ್ ಪುಸ್ತಕದಲ್ಲಿ ವಿವರವಾಗಿ ಹೀಗೆ ವಿವರಿಸಿದ್ದಾರೆ, "ಆ ವ್ಯಾಪಾರ ತಂಡವನ್ನು ತಡೆಯಲು ಹೊರಟಿರುವುದು ಆಕ್ಷೇಪಾರ್ಹವಲ್ಲ ಏಕೆಂದರೆ ಮೊದಲನೆಯದಾಗಿ, ಈ ನಿರ್ದಿಷ್ಟ ತಂಡವು ಪ್ರತಿ ಖುರೈಶ್ ಪುರುಷರು ಮತ್ತು ಮಹಿಳೆಯರು ವಾಣಿಜ್ಯ ಪಾಲನ್ನು ಹೊಂದಿದ್ದ ಅಸಾಮಾನ್ಯ ತಂಡವಾಗಿತ್ತು, ಅದರಿಂದ ಲಭಿಸುವ ಲಾಭವನ್ನು ಮುಸ್ಲಿಮರ ವಿರುದ್ಧ ಉಪಯೋಗಿಸಲು ಅವರು ನಿರ್ಧರಿಸಿದ್ದರು. ಅದರಿಂದ ಲಭಿಸಿದ ಲಾಭವನ್ನು ಉಹದ್ ಯುದ್ಧದ ತಯಾರಿಗಾಗಿಯೂ ಖರ್ಚು ಮಾಡಲಾಗಿತ್ತು ಎಂದು ಚರಿತ್ರೆಯಿಂದ ಸಾಬೀತಾಗುತ್ತಿದೆ. ಆದ್ದರಿಂದ ಅದನ್ನು ತಡೆಗಟ್ಟುವುದು ಯುದ್ಧ ತಂತ್ರದ ಅಗತ್ಯವಾದ ಭಾಗವಾಗಿತ್ತು. ಎರಡನೇಯದಾಗಿ ಈ ತಂಡವನ್ನು ತಡೆಗಟ್ಟುವುದು ಯುದ್ಧ ತಂತ್ರದ ಅತ್ಯಗತ್ಯ ಭಾಗವಾಗಿತ್ತು. ಏಕೆಂದರೆ ಈ ತಂಡಗಳು ಶಸ್ತ್ರಸಜ್ಜಿತವಾಗಿದ್ದವು ಮತ್ತು ಮದೀನಾಕ್ಕೆ ಬಹಳ ಸಮೀಪದಲ್ಲಿ ಹಾದುಹೋದವು, ಅವರು ಯಾವಾಗಲೂ ಮುಸ್ಲಿಮರಿಗೆ ಬೆದರಿಕೆಯನ್ನು ಒಡ್ಡುತ್ತಿದ್ದರು, ಅದನ್ನು ಎದುರಿಸಬೇಕಾಗಿತ್ತು. ಮೂರನೆಯದಾಗಿ, ಈ ತಂಡಗಳು ಎಲ್ಲೆಲ್ಲಿ ಹಾದುಹೋದರೂ, ಅರಬ್ ಗೋತ್ರಗಳು ಮುಸ್ಲಿಮರ ವಿರುದ್ಧ ತೀವ್ರ ಪ್ರಚೋದನೆಯನ್ನು ಉಂಟುಮಾಡುತ್ತಿದ್ದರು, ಇದರಿಂದಾಗಿ ಮುಸ್ಲಿಮರ ಪರಿಸ್ಥಿತಿ ಗಂಭೀರವಾಗುತ್ತಿತ್ತು. ಆದ್ದರಿಂದ ಅವರ ದಾರಿಯನ್ನು ತಡೆಯುವುದು ರಕ್ಷಣೆ ಮತ್ತು ಸ್ವಯಂ ಸಂರಕ್ಷಣೆಯ ಕಾರ್ಯಕ್ರಮದ ಭಾಗವಾಗಿತ್ತು. ನಾಲ್ಕನೆಯದಾಗಿ ಖುರೈಷರ ಜೀವನೋಪಾಯವು ಹೆಚ್ಚಾಗಿ ವ್ಯಾಪಾರದ ಮೇಲೆ ಆಧಾರಿತವಾಗಿತ್ತು, ಆದ್ದರಿಂದ ಈ ತಂಡಗಳ ತಡೆಗಟ್ಟುವಿಕೆ ಕ್ರೂರ ಖುರೈಶ್‌ಗಳನ್ನು ಎಚ್ಚರಗೊಳಿಸಲು ಮತ್ತು ಅವರ ಯುದ್ಧ ಚಟುವಟಿಕೆಗಳಿಂದ ಅವರನ್ನು ತಡೆಯಲು ಮತ್ತು ಶಾಂತಿ ಮತ್ತು ಸಾಮರಸ್ಯವನ್ನು ಸ್ಥಾಪಿಸಲು ಒತ್ತಾಯಿಸಲು ಉತ್ತಮ ಮಾರ್ಗವಾಗಿತ್ತು. ಪ್ರಸ್ತುತ ಕಾಲದಲ್ಲಿ ಇಂತಹ ಯುದ್ಧಗಳನ್ನು ತಡೆಯಲು ಕೆಲವು ದೇಶಗಳು ನಿರ್ಬಂಧಗಳನ್ನು ವಿಧಿಸುತ್ತವೆ. ಅವರು ತಪ್ಪು ನಿರ್ಬಂಧಗಳನ್ನು ಕ್ರೂರವಾಗಿ ವಿಧಿಸುತ್ತಾರೆ. ಆದರೆ ಇದು ಅದೇ ರೀತಿಯ ನಿರ್ಬಂಧಗಳನ್ನು ವಿಧಿಸುವ ಕ್ರಿಯೆಯಾಗಿದೆ. ಮತ್ತು ಆ ತಂಡಗಳನ್ನು ತಡೆಯುವುದಕ್ಕೆ ಮೂಲ ಉದ್ದೇಶವು ಲೂಟಿ ಮಾಡುವುದಿರಲಿಲ್ಲ ಬದಲಿಗೆ ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೇಳುತ್ತದೆ ಈ ವಿಶೇಶ ಅಭಿಯಾನದಲ್ಲಿ ಮುಸ್ಲಿಮರಿಗೆ ಆ ವ್ಯಪಾರ ತಂಡವನ್ನು ತಡೆಯುವುದರಲ್ಲಿ ಅವರ ಸಂಪತ್ತು ಮುಖ್ಯವಾಗಿರಲಿಲ್ಲ ಬದಲಿಗೆ ಅದಕ್ಕೆ ಕಾರಣ ಹೀಗೆ ಮಾಡಿದರೆ ಅದರಲ್ಲಿ ಕಡಿಮೆ ಸಂಕಟ ಮತ್ತು ಕಡಿಮೆ ಕಷ್ಟದ ಭಯವಿತ್ತು. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-343-344, ಮುದ್ರಣ 1996)

ಆದಾಗ್ಯೂ, ಹಝ್ರತ್ ಪೈಗಂಬರ್(ಸ) ಈ ವ್ಯಾಪಾರ ತಂಡದ ಬಗ್ಗೆ ಮಾಹಿತಿ ಪಡೆಯಲಿಕ್ಕಾಗಿ ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾಹ್(ರ) ಮತ್ತು ಹಝ್ರತ್ ಸಈದ್ ಬಿನ್ ಝೈದ್(ರ)ರನ್ನು ಮುಂದಕ್ಕೆ ಕಳುಹಿಸಿದರು. ಈ ಇಬ್ಬರು ಸಹಾಬಿಗಳು ಮದೀನಾವನ್ನು ತೊರೆದರು ಮತ್ತು ಅವರು ತಂಡಗಳ ಸುದ್ದಿಯನ್ನು ತಿಳಿದುಕೊಂಡು ಮದೀನಾಕ್ಕೆ ಹಿಂತಿರುಗಿದಾಗ, ಹಝ್ರತ್ ಪೈಗಂಬರ್(ಸಲ್ಲಲ್ಲಾಹು ಅಲೈಹಿವಸಲ್ಲಮ್) ಅವರು ಅಲ್ಲಿಂದ ಹೊರಟುಹೋದರು. ಆದ್ದರಿಂದ ಇಬ್ಬರೂ ಬದರ್‌ಗೆ ಹೊರಟರು, ಆದರೆ ದಾರಿಯಲ್ಲಿ ಅವರು ಬದ್ರ್ ಅಭಿಯಾನವನ್ನು ಮುಗಿಸಿ ಹಿಂತಿರುಗುತ್ತಿದ್ದಾಗ ಹಝ್ರತ್ ಪೈಗಂಬರ್(ಸ) ಅವರನ್ನು ಭೇಟಿಯಾದರು. ಆದ್ದರಿಂದ, ಈ ಇಬ್ಬರು ಸಹಾಬರು ಬದ್ರ್ ಯುದ್ಧದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ, ಆದರೆ ಹಝ್ರತ್ ಪೈಗಂಬರ್(ಸ) ಅವರು ಯುದ್ಧದ ಸಂಪತ್ತಿನಲ್ಲಿ ಅವರಿಬ್ಬರಿಗೂ ಪಾಲನ್ನು ನೀಡಿದರು. (ಅಸ್ಸೀರತುಲ್ ಹಲಬೀಯ, ಸಂಪುಟ-2, ಪುಟ-203, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಮತ್ತೊಂದೆಡೆ, ಹಝ್ರತ್ ಪೈಗಂಬರ್(ಸ) ತನ್ನ ಸಹಾಬಿಯರೊಂದಿಗೆ ಆ ವ್ಯಾಪಾರ ತಂಡದ ಮೇಲೆ ದಾಳಿ ನಡೆಸಲಿಕ್ಕಾಗಿ ಹೊರಟಿರುವರು ಎಂದು ಅಬೂಸುಫ್‌ಯಾನಿಗೆ ಸುದ್ದಿ ಮುಟ್ಟಿತು. ಅಬುಸುಫ್‌ಯಾನ್‌ಗೆ ಒಬ್ಬ ವ್ಯಕ್ತಿ ಭೇಟಿಯಾಗಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರು ಮುಂಚೆಯಿಂದಲೂ ಈ ವ್ಯಾಪಾರ ತಂಡವನ್ನು ತಡೆಯಲು ಬಯಸಿದ್ದರು ಮತ್ತು ಅವರು ಈಗ ರಸೂಲುಲ್ಲಾಹ್(ಸ) ಅವರನ್ನು ದಾರಿಯಲ್ಲಿಯೇ ಆ ವ್ಯಾಪಾರ ತಂಡವವು ಹಿಂದಿರುಗುವಿಕೆಗಾಗಿ ಕಾಯುತ್ತಿರುವುದಾಗಿ ನೋಡಿದನು ಎಂದು ಹೇಳಿದನು ಎಂದು ಸಹ ಹೇಳಲಾಗುತ್ತದೆ.

ಈ ಸುದ್ದಿಯನ್ನು ಆಲಿಸಿದ ನಂತರ ಅಬುಸುಫ್ಯಾನ್ ಬಹಳ ಭಯಭೀತನಾದನು ಮತ್ತು ಅವನು ಝುಮ್ಝುಮ್ ಬಿನ್ ಅಮ್ರ್ ಘಿಫಾರಿ ಎಂಬ ವ್ಯಕ್ತಿಯನ್ನು ಸ್ವಲ್ಪ ಕೂಲಿಯೊಂದಿಗೆ ಮಕ್ಕಾಕ್ಕೆ ಕಳುಹಿಸಿದನು ಮತ್ತು ಮಕ್ಕಾಕ್ಕೆ ಹೋಗಿ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿವಸಲ್ಲಮರು) ಅವರ ಸಂಗಡಿಗರೊಂದಿಗೆ ನಿಮ್ಮ ವ್ಯಾಪಾರ ತಂಡದ ಮೇಲೆ ದಾಳಿ ಮಾಡಲು ಹೊರಟಿದ್ದಾರೆ ಎಂದು ಹೇಳಲು ಹೇಳಿದನು.

ಆದ್ದರಿಂದ ಝುಮ್ಝುಮ್ ಬಹಳ ವೇಗದಿಂದ ಹೊರಟುಹೋದನು. (ಅಸ್ಸೀರತುಲ್ ಹಲಬೀಯ, ಸಂಪುಟ-2, ಪುಟ-197, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಅಬುಸುಫ್ಯಾನ್‌ನ ಈ ಸಂದೇಶವಾಹಕನು ಮಕ್ಕಾವನ್ನು ತಲುಪಿದಾಗ, ಅವನು ಅರಬ್ ಸಂವಿಧಾನದ ಪ್ರಕಾರ ಬಹಳ ಭಯಭೀತನಾದ ಪರಿಸ್ಥಿತಿಯನ್ನು ಉಂಟುಮಾಡಿದನು ಮತ್ತು ಓ ಮಕ್ಕಾ ಜನರೇ, ಮುಹಮ್ಮದ್(ಸ) ಮತ್ತು ಅವರ ಸಂಗಡಿಗರು ನಿಮ್ಮ ವ್ಯಾಪಾರ ತಂಡದ ಮೇಲೆ ದಾಳಿ ಮಾಡಲು ಹೊರಟಿದ್ದಾರೆ ಎಂದು ಜೋರಾಗಿ ಕೂಗಲು ಪ್ರಾರಂಭಿಸಿದನು. ನಡಿರಿ ಹೋಗಿ ಅವರನ್ನು ರಕ್ಷಿಸಿರಿ" ಎಂದು ಹೇಳಿದನು.

(ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-350, 1996 ಮುದ್ರಣ)

ಮತ್ತೊಂದೆಡೆ, ಅಬುಸುಫ್ಯಾನ್ ಬಹಳ ಎಚ್ಚರಿಕೆಯಿಂದ ಮಾಹಿತಿಯನ್ನು ಸಂಗ್ರಹಿಸುತ್ತ ಮುಸ್ಲಿಮರ ಈ ಸೈನ್ಯವನ್ನು ತಪ್ಪಿಸುತ್ತಾ ತನ್ನ ಪ್ರಯಾಣವನ್ನು ಮುಂದುವರೆಸುತ್ತಿದ್ದನು. ಆತನು ಬದ್ರ್‌ನ ಬುಗ್ಗೆ ತಲುಪಿದಾಗ ಅಲ್ಲಿದ್ದ ಒಬ್ಬ ವ್ಯಕ್ತಿಯನ್ನು ಕೇಳಿದನು, "ನೀವು ಇಲ್ಲಿ ಯಾರನ್ನಾದರೂ ನೋಡಿದ್ದೀರಾ?" ಅದಕ್ಕೆ ಅವನು ಹಳಿದನು: ಇಬ್ಬರು ಜನರು ಇಲ್ಲಿಗೆ ಬಂದು ತಮ್ಮ ಒಂಟೆಗಳನ್ನು ಈ ದಿಬ್ಬದ ಬಳಿ ಕೂರಿಸಿದರು ಮತ್ತು ನೀರು ತೆಗೆದುಕೊಂಡು ಹೊರಟುಹೋದರು. ಅಬುಸುಫ್ಯಾನ್ ಅವರ ಒಂಟೆಗಳಿದ್ದ ಸ್ಥಳಕ್ಕೆ ಹೋದನು. ಅಲ್ಲಿ ಒಂಟೆಗಳ ಗೊಬ್ಬರವನ್ನು ನೋಡಿದನು. ಅವನು ಅದರಿಂದ ಒಂದನ್ನು ಎತ್ತಿಕೊಂಡು ಅದನ್ನು ಮುರಿದನು ಮತ್ತು ಅದರಲ್ಲಿ ಒಂದು ತಾಳೆ ಕಾಳು ಇತ್ತು. ಅದನ್ನು ನೋಡಿದಾಗ ಇದು ಯಥ್ರಿಬ್‌ನ ಮೇವಾಗಿದೆ ಎಂದು ಹೇಳಿದನು ಮತ್ತು ಮದೀನಾದ ಜನರು ಅದರ ಹತ್ತಿರ ಎಲ್ಲೋ ಇದ್ದಾರೆ ಎಂದು ಅರ್ಥವಾಯಿತು. ಆದ್ದರಿಂದ ಅವನು ತನ್ನ ತಂಡಕ್ಕೆ ಹಿಂತಿರುಗಿದನು ಮತ್ತು ತನ್ನ ಸಹಚರರನ್ನು ಸುಪ್ರಸಿದ್ಧ ಮಾರ್ಗದಿಂದ ತಿರುಗಿಸಿ ಸಮುದ್ರದ ಕರಾವಳಿ ಪ್ರದೇಶದ ಕಡೆಗೆ ಹೊರಟು ಹೋದನು ಮತ್ತು ಬದ್ರ್ ಅನ್ನು ತನ್ನ ದಾರಿಯಲ್ಲಿ ಬಿಟ್ಟು ವೇಗವಾಗಿ ಮುಂದೆ ಹೊರಟನು.

(ಅರ್ರಹೀಖ್ ಅಲ್‌ಮಖ್ತೂಮ್ (ಅನುವಾದ), ಪುಟ-282-283, ಮುಕ್ತಾಬತ್ ಅಲ್-ಸಲಾಫಿಯಾ, ಲಾಹೋರ್ 2000)

ಈ ಕುರಿತು ಹಝ್ರತ್ ಪೈಗಂಬರ್(ಸ)ರ ದೊಡ್ಡಮ್ಮರಾದ ಆತಿಕ ಬಿನ್ತ್ ಅಬ್ದುಲ್ ಮುತಲ್ಲಿಬ್‌ರ ವಿಸ್ಮಯಕರವಾದ ಕನಸಿನ ಪ್ರಸ್ತಾಪವಿದೆ. ಅದು ನಂತರ ಕಾಲದಲ್ಲಿ ಸತ್ಯವಾಗಿ ಈಡೇರಿತು. ಆ ಕನಸು ಏನೆಂದರೆ, ಆತಿಕ ಬಿನ್ತ್ ಅಬ್ದುಲ್ ಮುತಲ್ಲಿಬ್ ಅವರು ಹಝ್ರತ್ ಪೈಗಂಬರ್(ಸ) ರವರ ದೊಡ್ಡಮ್ಮ ಮತ್ತು ಉಮ್ಮುಲ್ ಮುಮಿನೀನ್ ಹಝ್ರತ್ ಸಲ್ಮ(ರ) ರವರ ತಾಯಿಯಾಗಿದ್ದರು ಅವರು ಇಸ್ಲಾಂಗೆ ಮತಾಂತರಗೊಂಡ ಬಗ್ಗೆ ಎರಡು ಅಭಿಪ್ರಾಯಗಳನ್ನು ಹೇಳಲಾಗುತ್ತದೆ. ಕೆಲವರ ಪ್ರಕಾರ ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದರು, ಆದರೆ ಹೆಚ್ಚಿನವರ ಪ್ರಕಾರ ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿರಲಿಲ್ಲ. ಆದಾಗ್ಯೂ, ಅಬುಸುಫ್ಯಾನ್‌ನ ಸಂದೇಶವಾಹಕ ಝುಮ್ಝುಮ್ ಮಕ್ಕಾಗೆ ಆಗಮಿಸುವ ಮೂರು ರಾತ್ರಿಗಳ ಮೊದಲು, ಅವನು ಒಂದು ಕನಸು ಕಂಡನು, ಅದು ಅವನನ್ನು ಭಯಭೀತನನ್ನಾಗಿ ಮಾಡಿತು. ಅವರು ತಮ್ಮ ಸಹೋದರ ಅಬ್ಬಾಸ್ ಬಿನ್ ಅಬ್ದುಲ್ ಮುತ್ತಲಿಬ್ ಅವರನ್ನು ಕರೆದು ಹೇಳಿದರು: ಓ ಸಹೋದರ! ಅಲ್ಲಾಹನ ಆಣೆ, ನಿನ್ನೆ ರಾತ್ರಿ ನಾನು ಒಂದು ಕನಸು ಕಂಡೆ, ಅದು ನನ್ನನ್ನು ಬಹಳ ಭಯಭಿತಳನ್ನಾಗಿಸಿತು. ನಿಮ್ಮ ಜನರಿಗೆ ಏನಾದರೂ

ವಿಪತ್ತು ಅಥವಾ ತೊಂದರೆ ಬರಬಹುದೆಂದು ನಾನು ಹೆದರುತ್ತೇನೆ. ನಾನು ನಿಮಗೆ ಹೇಳಲಿರುವ ವಿಷಯವನ್ನು ರಹಸ್ಯವಾಗಿ ಇಟ್ಟುಕೊಳ್ಳಿ. ಮಕ್ಕಾದ ಖುರೈಷಿಗಳು ಇದನ್ನು ಕೇಳಿದರೆ ನಮಗೆ ತೊಂದರೆ ಕೊಡುತ್ತಾರೆ ಮತ್ತು ಶಾಪ ಹಾಕುತ್ತಾರೆ ಎಂಬ ಕಾರಣಕ್ಕೆ ಈ ವಿಷಯವನ್ನು ಯಾರ ಬಳಿಯೂ ಹೇಳುವುದಿಲ್ಲ ಎಂದು ನನಗೆ ವಾಗ್ದಾನ ನೀಡುವವರೆಗೆ ನಾನು ನಿಮಗೆ ಹೇಳುವುದಿಲ್ಲ ಎಂದು ಆತಿಕ ಅಬ್ಬಾಸ್‌ಗೆ ಹೇಳಿದ ವರದಿಯೂ ಇದೆ. ಆದ್ದರಿಂದ ಹಝ್ರತ್ ಅಬ್ಬಾಸ್(ರ) ಅವರೊಂದಿಗೆ ಒಪ್ಪಂದ ಮಾಡಿಕೊಂಡರು. ಆದಾಗ್ಯೂ, ಹಝ್ರತ್ ಅಬ್ಬಾಸ್(ರ) ನೀವು ಏನು ಕನಸ್ಸು ನೋಡಿದ್ದೀರಿ ಎಂದು ಕೇಳಿದರು. ಅದಕ್ಕೆ ಆತಿಕ ಹೇಳಿದರು: ಒಂಟೆಯ ಮೇಲೆ ಸವಾರನಾಗಿ ಒಬ್ಬ ವ್ಯಕ್ತಿ ಅಬ್‌ತಹ್‌ನ ಮೈದಾನದಲ್ಲಿ, ಕಅ್‌ಬ ಭವನದ ಮೇಲೆ ಮತ್ತು ಅಬೂಖಬೀಸ್ ಪರ್ವತ ಶಿಖರದಲ್ಲಿ ನಿಂತುಕೊಂಡು ಉಚ್ಚ ಸ್ವರದಲ್ಲಿ ಜನರೊಡನೆ ತಮ್ಮ ತಮ್ಮ ಮರಣಸ್ಥಳಗಳಿಗೆ ಮೂರು ದಿನಗಳೊಳಗೆ ತಲುಪಲು ಹೇಳುತ್ತಾನೆ. ಅನಂತರ ಅವನು ಒಂದು ಬಂಡೆಕಲ್ಲನ್ನು ಪರ್ವತದ ಮೇಲಿನಿಂದ ಕೆಳಗೆ ಉರುಳಿಸುತ್ತಾನೆ. ಆ ಕಲ್ಲು ಕೆಳಗೆ ತಲುಪಿದಾಗ ಚೂರುಚೂರಾಯಿತು. ಈ ಕಲ್ಲಿನ ಚೂರುಗಳು ಮಕ್ಕದ ಪ್ರತಿಯೊಂದು ಮನೆಗೆ ಪ್ರವೇಶಿಸಿದುವು.

ಇದನ್ನು ಆಲಿಸಿ ಹಝ್ರತ್ ಅಬ್ಬಾಸ್(ರ) ರವರು ಆತಿಕಾಗೆ ಹೇಳಿದರು ಅಲ್ಲಾಹನ ಆಣೆ! ಈ ಕನಸು ಬಹಳ ಮುಖ್ಯವಾಗಿದೆ. ನೀವು ಸ್ವತಃ ಅದನ್ನು ಮರೆಮಾಡಬೇಕು ಮತ್ತು ಅದನ್ನು ಯಾರಿಗೂ ಹೇಳಬಾರದು. ಅದರ ನಂತರ, ಹಝ್ರತ್ ಅಬ್ಬಾಸ್(ರ) ಆತಿಕಾ ಅವರ ಮನೆಯಿಂದ ಹೊರಟರು ಮತ್ತು ದಾರಿಯಲ್ಲಿ ಅವರು ವಲೀದ್ ಬಿನ್ ಉತ್ಬಾರನ್ನು ಭೇಟಿಯಾದರು. ಅವರು ಹಝ್ರತ್ ಅಬ್ಬಾಸ್(ರ) ಅವರ ಸ್ನೇಹಿತರಾಗಿದ್ದರು. ತನ್ನ ಸಹೋದರಿಗೆ ಹೇಳಬೇಡ ಎಂದು ಹೇಳಿದ್ದರು ಆದರೆ ಅವರೇ ಆ ಕನಸನ್ನು ವಲೀದ್ ಬಳಿ ಪ್ರಸ್ತಾಪಿಸಿದರು. ಆದಾಗ್ಯೂ, ಹಝ್ರತ್ ಅಬ್ಬಾಸ್(ರ) ಅದನ್ನು ಯಾರೊಂದಿಗೂ ಹೇಳದಂತೆ ನಿಷೇಧಿಸಿದರು, ಆದರೆ ಒಂದು ಸಲ ವಿಷಯ ಹೊರಬಂದರೆ ಮತ್ತೆ ಹೇಗೆ ಅದನ್ನು ತಡೆಯಲು ಸಾಧ್ಯ. ವಲೀದ್ ತನ್ನ ತಂದೆ ಉತ್ಬಾ ಬಳಿ ಅದನ್ನು ಪ್ರಸ್ತಾಪಿಸಿದರು. ಈ ರೀತಿಯಾಗಿ, ಈ ವಾತು ಮಕ್ಕಾದಲ್ಲಿ ಹರಡಿತು ಮತ್ತು ಇಬ್ಬರು ಜನರು ಎಲ್ಲಿ ಕುಳಿತುಕೊಂಡರೂ ಅದೇ ಕನಸ್ಸಿನ ಪ್ರಸ್ತಾವ ಆಗುತ್ತಿತ್ತು. ಹಝ್ರತ್ ಅಬ್ಬಾಸ್(ರ) ಹೇಳುತ್ತಾರೆ ಮರುದಿನ ಬೆಳಿಗ್ಗೆ ನಾನು ಪ್ರದಕ್ಷಿಣೆ ಮಾಡಲು ಕಾಅ್‌ಬಾಗೆ ಹೋದಾಗ, ಅಬುಜಹಲ್ ಅಲ್ಲಿ ಖುರೈಶಿಯ ಕೆಲವು ಜನರೊಂದಿಗೆ ಕುಳಿತಿದ್ದನು. ನನ್ನನ್ನು ನೋಡಿದ ಅವರು, ಓ ಅಬುಲ್ ಫಜಲ್! ಇದು ಹಝ್ರತ್ ಅಬ್ಬಾಸ್(ರ) ಅವರ ಉಪನಾಮವಾಗಿತ್ತು. ತವಾಫ್ ಅನ್ನು ಪೂರ್ಣಗೊಳಿಸಿದ ನಂತರ ನನ್ನನ್ನು ಭೇಟಿಯಾಗಿ ಹೋಗು ಎಂದು ಹೇಳಿದರು. ಹಝ್ರತ್ ಅಬ್ಬಾಸ್(ರ) ಹೇಳುತ್ತಾರೆ ನಾನು ತವಾಫ್ ಮುಗಿಸಿದ ನಂತರ ಅವರ ಬಳಿಗೆ ಹೋದಾಗ ಅಬುಜಹಲ್ ನನಗೆ ಓ ಬನು ಅಬ್ದುಲ್ ಮುತಲ್ಲಿಬ್! ನಿಮ್ಮಲ್ಲಿ ಪ್ರವಾದಿಯವರು ಹುಟ್ಟಲು ಪ್ರಾರಮಭಿಸಿದವು?

ಅದಕ್ಕೆ ನಾನು ಉತ್ತರಿಸಿದೆ ನಿನ್ನ ಅರ್ಥವೇನು? ನಿಮ್ಮಲ್ಲಿ ಪುರುಷರು ಪ್ರವಾದಿತ್ವವನ್ನು ಪ್ರತಿಪಾದಿಸಿದರು, ಅಂದರೆ ಅವರು ಹಝ್ರತ್ ಪೈಗಂಬರ್(ಸ) ಅವರನ್ನು ಸೂಚಿಸುತ್ತ ಹೇಳಿದರು. ಈಗ ನಿಮ್ಮ ಮಹಿಳೆಯರೂ ಪ್ರವಾದಿತ್ವವನ್ನು ಹೇಳಿಕೊಳ್ಳುತ್ತಿದ್ದಾರೆಯೇ. ಈ ಆತಿಕಾ ಕಂಡ ಕನಸು ಏನು? ಹಝ್ರತ್ ಅಬ್ಬಾಸ್(ರ) ಹೇಳುತ್ತಾರೆ, ನಾನು ಅವರು ಕಂಡ ಕನಸು ಏನು? ಅಬುಜಹಲ್‌ಗೆ ಹೇಳಿದರು, ಅದಕ್ಕೆ ಅಬುಜಹಲ್ ಹೇಳಿದನು, ಒಂಟೆಯ ಮೇಲೆ ಒಬ್ಬ ವ್ಯಕ್ತಿ ಸವಾರನಾಗಿ ಬರುವುದನ್ನು ನಾನು ನೋಡಿದೆ, ಮತ್ತು ಅವನು ಈ ಶಬ್ದವನ್ನು ಮಾಡಿದನು ಮತ್ತು ನಂತರ ಪರ್ವತದ ಕೆಳಗೆ ಒಂದು ಕಲ್ಲನ್ನು ಉರುಳಿಸಿದನು, ಹೀಗೆ ಆತನು ಸಂಪೂರ್ಣ ಕನಸನ್ನು ವಿವರಿಸಿದನು" ಎಂದು ಅವಳು ಹೇಳುತ್ತಾಳೆ. ಆಗ ಅಬುಜಹಲ್ ಹೇಳಿದನು, ನಾವು ಮೂರು ದಿನಗಳಷ್ಟು ಕಾಲ ಕಾಯುತ್ತೇವೆ. ಕನಸಿನಲ್ಲಿ ಕಂಡ ಹಾಗೆಯೇ ಸಂಭವಿಸಿದರೆ ಸರಿ, ಇಲ್ಲದಿದ್ದರೆ "ನೀವು ಅರೇಬಿಯದಲ್ಲಿ ಅತ್ಯಂತ ದೊಡ್ಡ ಸುಳ್ಳುಗಾರರಾಗಿರುವಿರಿ" ಎಂದು ನಾವು ಕಅ್‌ಬದಲ್ಲಿ ಒಂದು ಲಿಖಿತವನ್ನು ತೂಗು ಹಾಕುವೆವು. ನಾನು ಅಸಹಾಯಕನಾಗಿ ಈ ಕನಸನ್ನು ನಿರಾಕರಿಸಬೇಕಾಯಿತು ಎಂದು ಅಬ್ಬಾಸ್ ಹೇಳುತ್ತಾರೆ. ಅವರು ಯಾವುದೇ ಕನಸ್ಸನ್ನು ನೋಡಲಿಲ್ಲ ಎಂದು ನಾನು ಅವನಿಗೆ ಹೇಳಿದೆ ಮತ್ತು ಆತಿಕಾ ಯಾವುದೇ ಕನಸು ಕಂಡಿಲ್ಲ ಎಂದು ನಾನು ನಿರಾಕರಿಸಿದೆ. ನಂತರ ನಾವೆಲ್ಲರೂ ಆ ಸಭೆಯಿಂದ ಎದ್ದು ಸಂಜೆ ಮನೆಗೆ ಮರಳಿದಾಗ ಬನೂ ಅಬ್ದುಲ್ ಮುತಲ್ಲಿಬ್ ಅವರ ಎಲ್ಲಾ ಮಹಿಳೆಯರು ನನ್ನ ಬಳಿಗೆ ಬಂದು ಹೇಳಿದರು. ಮೊದಮೊದಲು ಆ ದುಷ್ಟ ದುಷ್ಕರ್ಮಿಯು ನಿನ್ನ ಪುರುಷರ ಮೇಲೆ ದೂಷಿಸುತ್ತಿದ್ದನು, ನೀನು ಅವನನ್ನು ಸಹಿಸಿಕೊಂಡೆ. ಈಗ ಅವನು ಮಹಿಳೆಯರನ್ನೂ ಕೆಟ್ಟದಾಗಿ ಮಾತನಾಡುತ್ತಾನೆ ಆದರೂ ನೀವು ಮೌನವಾಗಿ ಕೇಳುತ್ತೀರಿ ಮತ್ತು ಅವನ ಅಸಂಬದ್ಧತೆಗೆ ಯಾವುದೇ ಉತ್ತರವನ್ನು ನೀಡುವುದಿಲ್ಲ. ನಿನ್ನ ಮರ್ಯಾದೆ ಎಲ್ಲಿ ಹೋಯ್ತು ಅಂತ ಆ ಕುಟುಂಬದ ಹೆಂಗಸರು ಇವನಿಗೆ ಕೊಂಚ ಸಿಟ್ಟು ಮಾಡಿದರು. ಅಬ್ಬಾಸ್ ಹೇಳುತ್ತಾರೆ: ಅಲ್ಲಾಹನ ಆಣೆ! ನಾನು ಹಾಗೆಯೇ ಮಾಡಿದೆ. ನನ್ನ ಪಾಲಿಗೆ ಇದಕ್ಕಿಂತ ದೊಡ್ಡ ಅಪರಾಧ ಯಾವುದೂ ಇಲ್ಲ ಮತ್ತು ಅಲ್ಲಾಹನ ಆಣೆ! ನಾನು ಈಗ ಅವನ ಬಳಿಗೆ ಹೋಗುತ್ತೇನೆ ಅವನು ಮತ್ತೆ ಹೀಗೆಯೇ ವಾಡಿದರೆ ನಾನು ಅವನ ಕೆಲಸ ಪೂರ್ಣಗೊಳಿಸಲು ನಿಮ್ಮ ಪರವಾಗಿ ನಾನು ಅವನಿಗೆ ಪರಿಹಾರವನ್ನು ನೀಡುತ್ತೇನೆ.

ಹಝ್ರತ್ ಅಬ್ಬಾಸ್(ರ.ಅ) ಹೇಳುತ್ತಾರೆ ಆತಿಕಾ ರವರ ಕನಸಿನ ಮೂರನೇ ದಿನ ಬೆಳಿಗ್ಗೆ ನಾನು ಮನೆಯಿಂದ ಹೊರಟುಹೋದೆ ನಾನು ಅಂದು ನಿರ್ಲಕ್ಷಿಸಿದ್ದಕ್ಕೆ ಸೇಡು ತೀರಿಸಿಕೊಳ್ಳುತ್ತೇನೆ ಎಂದು ತುಂಬಾ ಆವೇಶದಲ್ಲಿದ್ದೆ. ನಾನು ಮಸೀದಿಯನ್ನು ಪ್ರವೇಶಿಸಿದಾಗ, ನಾನು ಅಬುಜಹಲ್ ಅನ್ನು ನೋಡಿದೆ. ಆತನು ನಯವಾದ ದೇಹವನ್ನು ಹೊಂದಿದ್ದ ತೀಕ್ಷ್ಣವಾದ ನಾಲಿಗೆಯ ವ್ಯಕ್ತಿಯಾಗಿದ್ದನು. ಅಲ್ಲಾಹನ ಆಣೆ! ಆತನು ಮೊದಲು ಆಡಿದ ವಾತುಗಳ ಹಾಗೆ ಈಗ ವಾಡಿದರೆ ನಾನು ಅವನ ಲೆಕ್ಕವನ್ನು ಪರಿಹರಿಸುತ್ತೇನೆ ಎಂದು ನಾನು ಅವನ ಬಳಿಗೆ ಹೋದೆ, ಆದರೆ ನಾನು ನೋಡಿದ್ದು ಅಬೂಜಹಲ್ ವುಸೀದಿಂಯ ಬಾಗಿಲಿನ ಕಡೆಗೆ ಓಡಿಹೋಗುತ್ತಿದ್ದಾನೆ. ಅವನ ಮೇಲೆ ಅಲ್ಲಾಹನ ಶಾಪವಿರಲಿ, ಅವನಿಗೆ ಏನಾಯಿತು, ನಾನು ಅವನಿಗೆ ಕೆಟ್ಟದ್ದನ್ನು ಹೇಳಬಹುದೆಂಬ ಭಯದಿಂದ ಅವನು ಓಡಿಹೋದನೇ ಎಂದು ನಾನು ನನ್ನ ಮನಸ್ಸಿನಲ್ಲಿ ಯೋಚಿಸಿದೆ, ಆದರೆ ವಾಸ್ತವವಾಗಿ ಅವನು ಝುಮ್‌ಝುಮ್ ಬಿನ್ ಅಮ್ರ್ ಘಿಫಾರಿಯ ಉಚ್ಚ ಧ್ವನಿಯನ್ನು ಆಲಿಸಿದ್ದನು ಆದರೆ ನಾನು ಆತನ ಧ್ವನಿಯನ್ನು ಕೇಳಿರಲಿಲ್ಲ ಮತ್ತು ಅವನು ಅಂದರೆ ಝುಮ್‌ಝುಮ್ ತನ್ನ ಒಂಟೆಯ ಮೇಲೆ ಕಣಿವೆಯ ಮಧ್ಯದಲ್ಲಿ ನಿಂತು ಜೋರಾಗಿ ಹೀಗೆ ಕೂಗುತ್ತಿದ್ದನು. ಅವನು ತನ್ನ ಒಂಟೆಯ ಮೂಗು ಮತ್ತು ಕಿವಿಗಳನ್ನು ಕತ್ತರಿಸಿದನು. ಕಜಾವೆಗಳನ್ನು ಉಲ್ಟಾ ಮಾಡಿ ಅಂಗಿ ಹರಿದುಕೊಂಡು ವ್ಯಾಪರ ತಂಡ! ವ್ಯಾಪಾರ ತಂಡ! ಎಂದು ಕೂಗಾಡುತ್ತಿದ್ದನು ಅಂದರೆ, ನಿಮ್ಮ ಈ ವ್ಯಾಪಾರ ತಂಡವನ್ನು ಉಳಿಸಿಕೊಳ್ಳಿ! ನಿಮ್ಮ ವ್ಯಾಪಾರದ ಸರಕುಗಳನ್ನು ಅದರ ಮೇಲೆ ಲೋಡ್ ಮಾಡಲಾಗಿದೆ, ಅದು ಅಬುಸುಫ್ಯಾನ್‌ನೊಂದಿಗೆ ಬರುತ್ತಿದೆ. ಮುಹಮ್ಮದ್(ಸ) ಮತ್ತು ಅವರ ಸಂಗಡಿಗರು ಅವನ ಮೇಲೆ ದಾಳಿ ಮಾಡಲು ಹೊರಟಿದ್ದಾರೆ. ನೀವು ಸಮಯಕ್ಕೆ ಅಲ್ಲಿಗೆ ತಲುಪಲು ಸಾಧ್ಯವಿಲ್ಲ ಎಂದು ನಾನು ಭಾವಿಸುತ್ತೇನೆ. ಆದರೆ, ಈ ಹೊಸ ಅವಘಡ ನನಗೆ ಮತ್ತು ತನಗೆ ತುಂಬಾ ಅಡ್ಡಿಪಡಿಸಿತು, ನಾವು ಮೊದಲನೆಯದನ್ನು ಗಮನಿಸಲು ಸಾಧ್ಯವಾಗಲಿಲ್ಲ ಎಂದು ಅಬ್ಬಾಸ್ ಹೇಳುತ್ತಾರೆ.

(ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಯಾಮ್, ಪುಟ 416–417, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–198, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2002) (ಅಲ್‌ಅಸಾಬ, ಸಂಪುಟ–8, ಪುಟ–229, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1995) (ಅಸ್ದಲ್ ಗ್ಹಾಬಹ್, ಸಂಪುಟ 7, ಪುಟ 183, ದಾರ್ ಅಲ್–ಕಿತಾಬ್ ಅಲ್–ಇಲಾಮಿಯಾ ಬೈರುತ್ 2016) (ಮಜಮ್ ಅಲ್–ಬುಲ್ದಾನ್, ಪುಟ 95, ದಾರ್ ಅಲ್–ಕಿತಾಬ್ ಅಲ್–ಇಲಮಿಯಾ ಬೈರುತ್ 2016 ಅನ್ನು ಪ್ರಕಟಿಸಲಾಗಿದೆ) (ಫರ್ಹಾಂಗ್ ಸೀರತ್, ಪುಟ 230, ಜೋರ್ ಅಕಾಡೆಮಿ ಕರಾಚಿ 2003 ಪ್ರಕಟಿಸಿದೆ)

ಮಕ್ಕಾದ ಖುರೈಷಿಗಳು ಝುಮ್ಝುಮ್‌ನ ಕರೆಯನ್ನು ಕೇಳಿದಾಗ ಅವರು ತುಂಬಾ ಉದ್ರೇಕಗೊಂಡರು ಮತ್ತು ಯುದ್ಧಕ್ಕೆ ಸಿದ್ಧರಾಗಲು ಜನರನ್ನು ಪ್ರಚೋದಿಸಲು ಪ್ರಾರಂಭಿಸಿದರು ಎಂದು ಬರೆಯಲಾಗಿದೆ. ಅವರು ಹೇಳಿದರು, ಮುಹಮ್ಮದ್(ಸ) ಮತ್ತು ಅವರ ಸಹಚರರು ಇದು ಇಬ್ನ್ ಹಝ್ರಮಿಂಯ ವ್ಯಾಪಾರ ತಂಡಗಳಂತಿದೆ ಎಂದು ಭಾವಿಸುತ್ತಾರೆಯೇ? ಅಸಾಧ್ಯ. ಅಲ್ಲಾಹನ ಆಣೆ! ಇದು ಹಾಗಲ್ಲ ಎಂದು ಅವರು ಕಂಡುಕೊಳ್ಳುತ್ತಾರೆ.

ಅಮ್ರ್ ಬಿನ್ ಹಝ್ರಮಿಯ ತಂಡ ಮತ್ತು ಮುಸ್ಲಿಮರಿಂದ ಅವನ ಹತ್ಯೆಯ ಬಗ್ಗೆ ಸರಿಯ್ಯ ಅಬ್ದುಲ್ಲಾ ಬಿನ್ ಜಹಶ್‌ನಲ್ಲಿ ಉಲ್ಲೇಖಿಸಲಾಗಿದೆ. ಮುಸ್ಲಿಮರು ಇಬ್ನ್ ಹಝ್ರಮಿಯನ್ನು ಬಹಳ ಸುಲಭವಾಗಿ ಕೊಂದು ಅವನ ಸಂಪತ್ತನ್ನು ವಶಪಡಿಸಿಕೊಂಡರು ಎಂದು ನಾನು ಮೊದಲೇ ಹೇಳಿದ್ದೆ. ಆದಾಗ್ಯೂ, ಈಗ ಮಕ್ಕಾದಲ್ಲಿರುವ ಖುರೈಷಿಗಳು ತಯಾರಿಯನ್ನು ಪ್ರಾರಂಭಿಸಿದರು ಮತ್ತು ಎಲ್ಲರೂ ಯುದ್ಧಕ್ಕೆ ಸ್ವತಃ ಹೋಗುತ್ತಿದ್ದರು ಅಥವಾ

ತಮ್ಮ ಸ್ವಂತ ಖರ್ಚಿನಲ್ಲಿ ಬೇರೆಯವರನ್ನು ಕಳುಹಿಸುತ್ತಿದ್ದರು. ಅವರ ಮುಖ್ಯಸ್ಥರೊಬ್ಬರು ಹೇಳಿದರು. ನಿಮ್ಮ ಸಂಪತ್ತನ್ನು ಲೂಟಿ ಮಾಡಲು ಮುಹಮ್ಮದ್(ಸ) ಮತ್ತು ಅವರ ಸಹಚರರು ಮತ್ತು ಯಾಸ್ರಬ್‌ನ ಜನರಿಗೆ ನೀವು ಅನುಮತಿಸುತ್ತೀರಾ? ಯಾರಿಗೆ ಸಂಪತ್ತು ಬೇಕು, ನನ್ನ ಸಂಪತ್ತು ಅವನಿಗೆ ಪ್ರಸ್ತುತ, ಮತ್ತು ಯಾರಿಗೆ ಅನ್ನ ಮತ್ತು ಪಾನೀಯ ಬೇಕು, ಅವನು ಪ್ರಸ್ತುತ, ಅದನ್ನು ಎಲ್ಲಿ ಮತ್ತು ಹೇಗೆ ಬೇಕಾದರೂ ಬಳಸಿ. ಯಾರೋ ಇಪ್ಪತ್ತು ಒಂಟೆಗಳನ್ನು ಯುದ್ಧಕ್ಕೆ ಅರ್ಪಿಸಿದರು. ಕೆಲವರು ಯುದ್ಧಕ್ಕೆ ಹೋದವರ ಕುಟುಂಬಗಳ ವೆಚ್ಚವನ್ನು ಭರಿಸುವ ಜವಾಬ್ದಾರಿಯನ್ನು ತೆಗೆದುಕೊಂಡರು ಮತ್ತು ಯುದ್ಧಕ್ಕೆ ಹೋಗಲಾಗದವರು ಅವನ ಸ್ಥಾನದಲ್ಲಿ ಇನ್ನೊಬ್ಬ ವ್ಯಕ್ತಿಯನ್ನು ತನ್ನ ಸ್ವಂತ ಖರ್ಚಿನಲ್ಲಿ ಕಳುಹಿಸಿದರು ಮತ್ತು ಹೀಗೆ ಯುದ್ಧದ ಸಿದ್ಧತೆಗಳು ಎರಡು ಅಥವಾ ಮೂರು ದಿನದೊಳಗೆ ಆಯಿತು

(ಸಬ್ಲುಲ್ ಹುದಾ ವರ್‌ರ್ಶ್ಶಾದ್, ಸಂಪುಟ 4, ಪುಟ 21, ದಾರುಲ್‌ಕುತುಬ್ ಅಲ್-ಇಲ್ಮೀಯಾ, ಬೈರುತ್, 1993)

ಕೂಡಲೇ ಬರಬೇಕು ಎಂದು ಘೋಷಿಸಿದ್ದ ಅವರು ಎರಡು ಮೂರು ದಿನಗಳ ಕಾಲ ಯುದ್ಧಕ್ಕೆ ಭರ್ಜರಿ ತಯಾರಿ ನಡೆಸಿದ್ದು, ಮಕ್ಕಾದ ಅವಿಶ್ವಾಸಿಗಳು ಮುಸಲ್ಮಾನರ ಜತೆ ನಿತ್ಯ ಯುದ್ಧಕ್ಕೆ ನೆಪವನ್ನು ಹುಡುಕುತ್ತಿದ್ದುದನ್ನು ಈ ಸಿದ್ಧತೆಯಿಂದ ತಿಳಿಯಬಹುದು. ಇಲ್ಲದಿದ್ದರೆ, ವ್ಯಾಪಾರ ತಂಡವನ್ನು ಉಳಿಸುವ ಉದ್ದೇಶವಿದ್ದರೆ, ಈ ಸುದ್ದಿ ನೀಡಿದ್ದರಿಂದ ಅವರು ತಕ್ಷಣ ತಲುಪುತ್ತಿದ್ದರು. ಯಾರ ಕೈಗೆ ಯಾವ ಆಯುಧ ಲಭಿಸಿತು ಅದನ್ನು ಅವರು ತೆಗೆದುಕೊಂಡು ಹೋದರು, ಆದರೆ ಹೀಗೆ ಸಂಭವಿಸಲಿಲ್ಲ, ಬದಲಿಗೆ ಅವರು ತಂಡದ ಬದಲಿಗೆ ಯುದ್ಧಕ್ಕೆ ಸಿದ್ಧರಾದರು.

ನಂತರ ಖುರೈಶ್ ನಾಯಕರ ಬಗ್ಗೆ ಬರೆಯಲಾಗಿದೆ, ಖುರೈಶ್‌ಗಳ ಐದು ನಾಯಕರು, ಉಮಯ್ಯ ಬಿನ್ ಖಲಫ್, ಉತ್ಬಾ ಬಿನ್ ರಬಿಅಹ್, ಶೈಬಾ ಬಿನ್ ರಬಿಅಹ್, ಝುಮಾಹ್ ಬಿನ್ ಅಸ್ವದ್ ಮತ್ತು ಹಕೀಮ್ ಬಿನ್ ಹಿಜಾಮ್, ನಿರ್ಧರಿಸಲು ಬಾಣಗಳಿಂದ ಚೀಟು ಹಾಕಿದರು. ಯುದ್ಧಕ್ಕೆ ಹೋಗಬೇಕೋ ಬೇಡವೋ ಎಂದು ಅದರಲ್ಲಿ ಯುದ್ಧಕ್ಕೆ ಹೋಗಬಾರದು ಎಂದು ಎಂದು ಬಾಣವು ಹೊರಬಂದಿತು, ಅಂದರೆ, "ಯುದ್ಧ ಮಾಡಬೇಡಿ" ಎಂದು ಬರೆದ ಬಾಣವು ಹೊರಬಂದಿತು. ಆದ್ದರಿಂದ ಈ ಜನರು ಯುದ್ಧಕ್ಕೆ ಹೋಗುವುದಿಲ್ಲ ಎಂದು ಎಲ್ಲರೂ ಒಟ್ಟಾಗಿ ನಿರ್ಧರಿಸಿದರು, ಆದರೆ ನಂತರ ಅಬುಜಹಲ್ ಅವರ ಬಳಿಗೆ ಬಂದು ಅವರೆಲ್ಲರನ್ನು ಕರೆದೊಯ್ಯಲು ಒತ್ತಾಯಿಸಿದನು. ಈ ನಿಟ್ಟಿನಲ್ಲಿ, ಉಕ್ಬಾ ಬಿನ್ ಅಬು ಮುಯೆತ್ ಮತ್ತು ನರ್ಝರ್ ಬಿನ್ ಹಾರಿಸ್ ಸಹ ಅಬುಜಹಲ್ ಅನ್ನು ಬೆಂಬಲಿಸಿದರು ಮತ್ತು ಈ ಜನರನ್ನು ಕರೆದುಕೊಂಡು ಹೋಗಬೇಕೆಂದು ಒತ್ತಾಯಿಸಿದರು. ಉತ್ಬಾ ಮತ್ತು ಶೆಬಾದ ಗುಲಾಮರು ಅವರಿಗೆ ಹೇಳಿದರು: ಅಲ್ಲಾಹನ ಆಣೆ! ನೀವಿಬ್ಬರು ಯುದ್ಧಕ್ಕೆ ಹೋಗುತ್ತಿಲ್ಲ ಆದರೆ ನಿಮ್ಮ ಕೊಲ್ಲುವ ನೆಲಕ್ಕೆ.

ಇದಾದ ಮೇಲೆ ಇಬ್ಬರೂ ಯುದ್ಧಕ್ಕೆ ಹೋಗದಿರಲು ನಿರ್ಧರಿಸಿದ್ದರು, ಆದರೆ ಅಬುಜಹಲ್‌ನ ಒತ್ತಾಯ ಎಷ್ಟು ಹೆಚ್ಚಾಯಿತು ಎಂದರೆ ಇಬ್ಬರೂ ದಾರಿಯಲ್ಲಿ ಹಿಂತಿರುಗುವ ಉದ್ದೇಶದಿಂದ ಎಲ್ಲರೊಂದಿಗೆ ಹೋಗಲು ಸಿದ್ಧರಾದರು.

(ಅಸ್ಸೀರತುಲ್ ಹಲಬೀಯ, ಸಂಪುಟ-2, ಪುಟ 200-201, ದಾರುಲ್ ಕುತುಬ್ ಇಲ್‌ಮಿಯಾ ಬೈರೂತ್ ಲೆಬನಾನ್, 2002)

ಯುದ್ಧಕ್ಕಾಗಿ ಅವಿಶ್ವಾಸಿಗಳ ಸಿದ್ಧತೆಗಳು ಮತ್ತು ಅವರ ನಿರ್ಗಮನ ಮತ್ತು ಅದರ ಘಟನೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಇನ್‌ಶಾಅಲ್ಲಾಹ್ ನಂತರ ವಿವರಿಸಲಾಗುವುದು.

...*...*...*...

## ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ವಾರಪತ್ರಿಕೆ "ಬದರ್" ಇದೀಗ ಕನ್ನಡದಲ್ಲಿ ಪ್ರಕಟಗೊಳ್ಳುತ್ತಿದೆ.

ಈ ಪತ್ರಿಕೆಯ ಹೆಸರು **"ಬದರ್"** ಎಂದಾಗಿದೆ. ಪೂರ್ಣ ಚಂದ್ರ ಎಂದರ್ಥ. ಇದು ಜಮಾಅತೆ ಅಹ್ಮದಿಯದ ಒಂದು ಧಾರ್ಮಿಕ ಪತ್ರಿಕೆ ಆಗಿದೆ ಅದರ ಮೂಲ ಉದ್ದೇಶ ಜಮಾಅತ್ತಿನ ಸದಸ್ಯರ ತರಬೇತಿ, ಶಿಕ್ಷಣ, ಒಳ್ಳೆ ನೈತಿಕತೆ ಕಲಿಸುವುದಾಗಿದೆ.

ನಮ್ಮ ಎರಡು ಉದ್ದೇಶಗಳಿವೆ. ಒಂದು ಅಲ್ಲಾಹನ ಹಕ್ಕನ್ನು ನಿಭಾಯಿಸುವುದು ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ.

ಅಲ್ಲಾಹನ ಹಕ್ಕು ಏನಾಗಿದೆ ಎಂದರೆ ಅವನನ್ನು ಆರಾಧಿಸುವುದು ಅವನು ಎಲ್ಲಾ ಸ್ತುತಿ ಸರ್ವ ಲೋಕಗಳ ಪರಿಪಾಲಕನಾಗಿದ್ದಾನೆ ಮತ್ತು ಅವನ ಉಪಕಾರಗಳನ್ನು ನೆನಪಿಸಿಕೊಂಡು ಅವನಿಗೆ ವಿಧೇಯತೆ ತೋರಿಸುವುದಾಗಿದೆ.

ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ. ದಾಸರ ಹಕ್ಕುಗಳೇನಂದರೆ ಅಗತ್ಯವುಳ್ಳವರನ್ನು ಸಹಾಯ ಮಾಡುವುದು, ಯಾರನ್ನು ದುಃಖ, ತೊಂದರೆ ಅಥವಾ ಸಂಕಷ್ಟ ಕೊಡಬಾರದು, ರಾಷ್ಟ್ರದಲ್ಲಿ ಕಿಡಿಗೇಡಿತನ ಹುಟ್ಟಿಸಬಾರದು, ಸ್ವದೇಶ ಪ್ರೇಮ ಈಮಾನಿನ ಒಂದು ಭಾಗವಾಗಿದೆ ಹಾಗೂ ಸ್ವದೇಶದ ಅಭಿವೃದ್ಧಿಗಾಗಿ ಶ್ರಮವಹಿಸುವುದಾಗಿದೆ.

ಈ ಪತ್ರಿಕೆಯು 100 ವರ್ಷಕ್ಕಿಂತ ಹೆಚ್ಚು ಕಾಲಾವಧಿಯಿಂದ ಈ ಉದ್ದೇಶದ ಪ್ರಕಾರ ಜಮಾಅತ್ತಿನ ಸದಸ್ಯರ ಶೈಕ್ಷಣಿಕವಾಗಿ ತರಬೇತಿ ಮಾಡುತ್ತಾ ಬಂದಿದೆ. ಅದರ ಪ್ರತಿ ಫಲವಾಗಿ ನಮಗೆ ಅಲ್ಲಾಹನ ಅನುಗ್ರಹದಿಂದ ಶಾಂತಿಯುತ ಪಂಗಡ ಎಂದು ವಿಶ್ವದಾದ್ಯಂತ ಪರಿಗಣಿಸುತ್ತಾರೆ.

ಅಕ್ಟೋಬರ್ 1902ರಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಸಂಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖದಿಯಾನಿ(ಅಲೈಹಿಸ್ಸಲಾಮ್) ಅವರು ಈ ಪತರಿಕೆಯನ್ನು ಉರ್ದು ಭಾಷೆಯಲ್ಲಿ ಉದ್ಘಾಟಿಸಿದರು. ಇಂದು ಈ ಪತ್ರಿಕೆಯು ಭಾರತದ ಏಳು ಭಾಷೆಗಳಲ್ಲಿ ಭಾಷಾಂತರವಾಗಿ ಪ್ರಕಟಗೊಳ್ಳುತ್ತಿದೆ. ಉರ್ದುವನ್ನು ಬಿಟ್ಟು ಹಿಂದಿ, ತಮಿಳು, ತೆಲುಗು, ಬಾಂಗ್ಲ, ಉಡಿಯಾ, ಮಳಯಾಳಂ ಹಾಗೂ ಕನ್ನಡ. ಕಳೆದ 4 ವರ್ಷದಿಂದ ಕನ್ನಡದಲ್ಲಿಯು ಈ ಪತ್ರಿಕೆಯು ಪ್ರಕಟಗೊಳ್ಳುತ್ತಿರುವುದು ಬಹಳ ಸಂತೋಷದ ವಿಷಯವಾಗಿದೆ. ಈ ಪತ್ರಿಕೆಯು ಧಾರ್ಮಿಕ ಪತ್ರಿಕೆ ಆದ್ದರಿಂದ ರಾಜಕೀಯ ನಿಟ್ಟಿನಲ್ಲಿ ಯಾವ ಸಂಬಂಧವೂ ಇಲ್ಲ.

ಈ ಪತ್ರಿಕೆಯಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರವರ ಶುಕ್ರವಾರದ ಪ್ರವಚನ (ಖುತ್‌ಬ ಜುಮುಅ) ವಿಶೇಷವಾಗಿರುತ್ತದೆ. ಆ ಖುತ್‌ಬದಲ್ಲಿ ಅವರು ಪವಿತ್ರ ಖುರ್‌ಆನ್ ಹಾಗೂ ಹದೀಸ್‌ಗಳ ಶಿಕ್ಷಣಗಳ ಪ್ರಕಾರ ತಮ್ಮ ಜಮಾಅತ್ತಿನ ಸದಸ್ಯರನ್ನು ಸಂಬೋಧಿಸುತ್ತಾರೆ. ನಿಮ್ಮ ಈ ಪ್ರವಚನವೂ ಎಂ.ಟಿ.ಎ ಎಂಬ ಚ್ಯಾನಲ್‌ನಲ್ಲಿ ಪ್ರತಿ ಶುಕ್ರವಾರ ನೇರವಾಗಿ ಪ್ರಸಾರವಾಗುತ್ತದೆ. ಅದನ್ನು ಇಡೀ ವಿಶ್ವದಾದ್ಯಂತ ಕೇಳ ಹಾಗೂ ನೋಡಬಹುದು. ತದನಂತರ ಈ ಖುತ್‌ಬ ಪತ್ರಿಕೆಯಲ್ಲಿ ಪಕಟಗೊಳ್ಳುತ್ತದೆ. ಖಲೀಫರ ಖುತ್‌ಬ ಈ ಪತ್ರಿಕೆಯ ಪ್ರಾಣವಾಗಿದೆ.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ವಾಗ್ದಾತ್ತ ಮಹೀಹರ 5ನೇ ಖಲೀಫರಾಗಿದ್ದಾರೆ ಅವರು ಲಂಡನ್‌ನಲ್ಲಿ ವಾಸವಾಗಿದ್ದಾರೆ. ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಇಮಾಮರಾಗಿದ್ದಾರೆ. ಅದಲ್ಲದೆ ಈ ಪತ್ರಿಕೆಯಲ್ಲಿ ಖಲೀಫರ ಪ್ರವಾಸಗಳ ವರದಿಗಳು ಪ್ರಕಟಗೊಳ್ಳುತ್ತದೆ ಅವೂ ಬಹಳ ಕುತೂಹಲಕಾರಿ ಆಗಿರುತ್ತದೆ. ಈ ವರದಿಗಳು ಜಮಾಅತ್ತಿನ ಸದಸ್ಯರ ಜ್ಞಾನ ಅಭಿವೃದ್ಧಿಯಲ್ಲಿ ವಿಶೇಷವಾಗಿ ಕಾರ್ಯ ನಿರ್ವಹಿಸುತ್ತದೆ. ಇದಲ್ಲದೆ ಜಮಾಅತ್ತಿನ ಕಾರ್ಯಗಳ ವರದಿಗಳು ಮತ್ತು ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಅಭಿಮೃದ್ಧಿಸುವಂತಹ ಜ್ಞಾನ ಭರಿತ ಲೇಖನಗಳು ಪ್ರಕಟಗೊಳ್ಳುತ್ತದೆ.

ಹೀಗಾಗಿ ಈ ಪತ್ರಿಕೆಯು ಮಹತ್ವಪೂರ್ಣವಾದ ಪತ್ರಿಕೆ ಆಗಿದೆ.

ಎಲ್ಲಾ ಓದುಗರಲ್ಲಿ ಈ ಪತ್ರಿಕೆಯನ್ನು ಕೊಂಡುಕೊಳ್ಳಬೇಕಾಗಿ ವಿನಂತಿಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: +91 99153 79255, 9902678609, 9866358609 (ವ್ಯವಸ್ಥಾಪಕರು)

## ಆಡಂಬರ ಮತ್ತು ತೋರ್ಪಡಿಕೆಗೋಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಅಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ-3, ಪುಟ-284) (ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಕೇಳುಗರೇ! ಕೇಳುಗರೇ! ಈ ನಿಜವಾದ ಆತ್ಮದ ಸ್ಥಿತಿಯನ್ನು ಸಾಧಿಸಿದಾಗ ಮತ್ತು ಮಾನವ ಆತ್ಮದ ಶ್ರದ್ಧೆಯು ಈ ಮಟ್ಟವನ್ನು ತಲುಪಿದಾಗ, ಆಗ ಆಕಾಶದಿಂದ ಒಂದು ಸ್ವೀಕಾರವು ಪ್ರಕಟವಾಗುತ್ತದೆ ಮತ್ತು ಈ ಸೇವಕನಿಗೆ ಏನಾಗುತ್ತಿದೆ ಎಂಬುದನ್ನು ಕೇಳುವ ಮೂಲಕ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಆ ಶುಭ ದಿನಗಳು ಯಾರಿಗಾದರೂ ಬಂದಾಗ ಮಾತ್ರ ಮತ್ತು ಆ ಸಮಯದಲ್ಲಿ ಅವನ ಆತ್ಮದ ನಿರ್ಧಾರವು ಸರ್ವಶಕ್ತನಾದ ಅಲ್ಲಾಹನ ಇಚ್ಛೆಯ ಪ್ರಕಾರವಾಗಿರುತ್ತದೆ.

ಆದ್ದರಿಂದ ಪ್ರೀಯರೇ, ಈ ಸಮಯವು ನಿಮಗೆ ಬಂದಿಲ್ಲದಿದ್ದರೆ, "ಆ ದಿನ", ಆ ಶುಭ ದಿನ, ಆ ಕೊನೆಯ ತೀರ್ಪಿನ ದಿನ, ನಿಮ್ಮ ಜೀವನದ ಆ ದಿನ, ಯೌಮುಲ್ ಫುರ್ಖಾನ್ ದಿನವನ್ನು ಅನುಗ್ರಹಿಸಲಿ ಎಂದು ನೀವು ಪ್ರಾರ್ಥಿಸಿ ಮತ್ತು ಪ್ರಯತ್ನಿಸಿ. ಆಮೀನ್

**(ಮುದ್ರಣ ಅಲ್‌ಫರ್ಝುಲ್ ಖಾದಿಯಾನ್ 4 ಸೆಪ್ಟೆಂಬರ್ 1936)**

## ತಫ್ಸೀರೆ ಕಬೀರ್

**ಪವಿತ್ರ ಖುರ್‌ಆನ್‌ನ ಬೋಧನೆಗಳನ್ನು ಹೊರತುಪಡಿಸಿ ಪ್ರಪಂಚದ ಭಿನ್ನತೆಗಳನ್ನು ಅಳಿಸಬಲ್ಲ ಬೇರೆ ಯಾವ ಬೋಧನೆಗಳಿವೆ.**

**ಈ ಮಾತುಗಳು ದೇವರಿಂದ ಬಂದದ್ದು ಎಂದು ಜಗತ್ತು ತಿಳಿದುಕೊಂಡರೆ ಅವರು ತಮ್ಮ ಆಲೋಚನೆಗಳನ್ನು ತ್ಯಜಿಸುತ್ತಾರೆ**

ಸಯ್ಯದ್‌ನಾ ಹಝ್‌ರತ್ ಮುಸ್ಲೆಹ್ ಮೌಊದ್(ರ) ಸುರಾ ಅನ್ನಹ್ಲ್ ಆಯತ್ 65 **ವಮಾ ಅನ್‌ಝಲ್‌ನಾ ಅಲೈಕಲ್ ಕಿತಾಬ ಇಲ್ಲಾ ಲಿತುಬಯ್ಯಿನ ಲಹುಮುಲ್ಲಝಿಖ್‌ತಲಫೂ ಫೀಹೀ; ವಹುದೌನ್ನರಹ್ಮತಲ್ಲಿ ಖೌಮಿಂಯ್ಯುಮಿನೂನ್** ಅನ್ನು ವ್ಯಾಖ್ಯಾನಿಸುತ್ತ ಹೇಳುತ್ತಾರೆ:

ದೈವಿಕ ಮಾತುಗಳ ಅವತರಣಿಕೆಯ ಇನ್ನೊಂದು ಅವಶ್ಯಕತೆ ಏನೆಂದರೆ ಜಗತ್ತಿನಲ್ಲಿ ಜನರು ನೈತಿಕ ಮತ್ತು ಧಾರ್ಮಿಕ ವಿಷಯಗಳ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದಾರೆ. ಈ ಭಿನ್ನಭಿಪ್ರಾಯಗಳು ಸರ್ವಶಕ್ತನಾದ ಅಲ್ಲಾಹನಿಂದ ನಿರ್ದಿಷ್ಟ ಜ್ಞಾನವನ್ನು ಪಡೆಯದೆ ಹೇಗೆ ತೆಗೆದುಹಾಕಬಹುದು? ಆದ್ದರಿಂದ ಈ ಜ್ಞಾನವನ್ನು ನೀಡಲು ಈ ಪುಸ್ತಕವನ್ನು ಅವತರಿಸಲಾಗಿದೆ. ಇದನ್ನು ಹೊರತುಪಡಿಸಿ, ಯಾವ ಶಿಕ್ಷಣವು ಪ್ರಪಂಚದ ಭಿನ್ನಭಿಪ್ರಾಯಗಳನ್ನು ಅಳಿಸಬಹುದು. ಈ ಮಾತುಗಳು ದೇವರಿಂದ ಬಂದದ್ದು ಎಂದು ಜಗತ್ತು ತಿಳಿದುಕೊಂಡರೆ ಅವರು ತಮ್ಮ ಆಲೋಚನೆಗಳನ್ನು ತ್ಯಜಿಸುತ್ತಾರೆ. ಅದು ಇಲ್ಲದೆ ಅವರು ಹೇಗೆ ತಮ್ಮ ಆಲೋಚನೆಗಳನ್ನು ಬಿಡುತ್ತದೆ, ಏಕೆಂದರೆ ಸ್ವಾಭಾವಿಕವಾಗಿ ಪ್ರತಿಯೊಬ್ಬರೂ ಇತರರ ಆಲೋಚನೆಗಳಿಗಿಂತ ತಮ್ಮ ಆಲೋಚನೆಗಳಿಗೆ ಆಧ್ಯತೆ ನೀಡುತ್ತಾರೆ.

ಈ ಆಯತ್‌ನಲ್ಲಿ ಮೊದಲ ಆಗಮಿಸಿರುವ ಪ್ರವಾದಿಗಳ ನಂತರ ಬೇರೆ ಪ್ರವಾದಿಯರ ಆಗಮನವನ್ನು ನೀವು ವಿರೋಧಿಸುತ್ತೀರಿ ಎಂಬ ಸೂಚನೆಯೂ ಇದೆ. ನಿಮ್ಮ ಕಾರ್ಯಗಳಿಂದಾಗಿ ಎರಡನೆಯ ಪ್ರವಾದಿಯು ಆಗಮಿಸಿದ್ದಾರೆ, ನೀವು ಸತ್ಯವನ್ನು ತ್ಯಜಿಸಿ ಏಕೆ ಭಿನ್ನಭಿಪ್ರಾಯದಲ್ಲಿದ್ದೀರಿ? ನೀವು ಭಿನ್ನಭಿಪ್ರಾಯ ಮಾಡುತ್ತಿರದಿದ್ದರೆ, ನಿಸ್ಸಂದೇಹವಾಗಿಯೂ ಪ್ರವಾದಿಯ ಅಗತ್ಯವಿರಲಿಲ್ಲ, ಆದರೆ ನೀವು ರೋಗವನ್ನು ಸೃಷ್ಟಿಸಿದ್ದೀರಿ ಮತ್ತು ಈಗ ನೀವು ಅಲ್ಲಾಹನಿಂದ ಯಾವುದೇ ಭಿನ್ನಾಭಿಪ್ರಾಯವನ್ನು ತೆಗೆದುಹಾಕಲು ವ್ಯಕ್ತಿಯ ಬರುವಿಕೆಯ ಅಗತ್ಯವಿಲ್ಲ ಎಂದು ಹೇಳುತ್ತೀರಿ.

ಮೇಲಿನ ಲೇಖನದಲ್ಲಿ ಒಂದು ಪ್ರಶ್ನೆಯನ್ನು ಕೇಳಬಹುದು, ಜನರು ಹಝ್‌ರತ್ ಮೂಸಾ(ಅ) ಅವರ ಶರಿಯಾವನ್ನು ಅನುಸರಿಸುವುದನ್ನು ಮುಂದುವರೆಸಿದರೆ ಮತ್ತು ಭಿನ್ನಾಭಿಪ್ರಾಯವಿಲ್ಲದಿದ್ದರೆ, ರಸೂಲುಲ್ಲಾಹ್(ಸ) ಅವರಿಂದ ಪರಿಪೂರ್ಣ ಷರಿಯಾ ಅಥವಾ ಪರಿಪೂರ್ಣ ಬೋಧನೆ ಬರುತ್ತಿರಲಿಲ್ಲವೇ? ಇದಕ್ಕೆ ಉತ್ತರ ಏನೆಂದರೆ ಇದು ಹುಸಿ ಮಾತಾಗಿದೆ. ವಾಸ್ತವವಾಗಿ, ಜನರು ಭಿನ್ನಾಭಿಪ್ರಾಯದಿಂದ ನಿಲ್ಲುತ್ತಿರಲಿಲ್ಲ ಅಥವಾ ಈ ಶಿಕ್ಷಣದ ಬರುವಿಕೆಯಲ್ಲಿ ಯಾವುದೇ ತಡೆ ಇರುತ್ತಿರಲಿಲ್ಲ. ಒಂದು ವೇಳೆ ಈ ಮಾತನ್ನು ಓಪ್ಪಿಕೊಂಡರೂ ಸರ್ವಶಕ್ತನಾದ ಅಲ್ಲಾಹನು ಇದಕ್ಕೆ ಉತ್ತರ ನೀಡಿರುವನು ಅಂದರೆ **ಲೌ ಕಾನ ಫಿಲ್‌ಅರ್ಝಿ ಮಲಾಇಕತುಯ್ಯಮ್‌ಶೂನ ಮುತ್‌ಮಿನ್ನೈನ ಲನಝ್ಝಲ್‌ನಾ ಅಲೈಹಿಮ್ ಮಿನಸ್ಸಮಾಇ ಮಲಕರ್‍ರಸೂಲ** (ಬನೀ ಇಸ್ರಾಈಲ್: ರುಕು 11) ಅಂದರೆ ಭೂಮಿಯಲ್ಲಿ ನೆಮ್ಮದಿಯಿಂದ ನಡೆದಾಡುವ ದೇವದೂತರು ನೆಲೆಸಿರುತ್ತಿದ್ದರೆ ನಾವು ಅವರಿಗೆ ಆಕಾಶದಿಂದ ಒಬ್ಬ ದೇವದೂತನನ್ನು ಸಂದೇಶವಾಹಕನಾಗಿ ಕಳುಹಿಸುತ್ತಿದ್ದೆವು ಎಂದು ಹೇಳು. ಒಂದು ವೇಳೆ ಲೋಕದಲ್ಲಿ ಎಲ್ಲರೂ ದೇವದೂತರೇ ಇರುತ್ತಿದ್ದರೆ, ಅಂದರೆ ಎಲ್ಲ ಮನುಷ್ಯರೂ ಒಳ್ಳೆಯವರೇ ಇರುತ್ತಿದ್ದರೆ ನಾವು ಅವರಲ್ಲಿ ಪ್ರತಿಯೊಬ್ಬರ ಮೇಲೆ ನಮ್ಮ ವಾಣಿಯನ್ನು ಅವತರಿಸುತ್ತಿದ್ದೆವು ಅಂದರೆ ಇಂತಹ ಪರಿಸ್ಥಿತಿಯಲ್ಲಿ ಒಬ್ಬ ನಬಿಯನ್ನು ಜನಾಂಗದ ಕಡೆಗೆ ಕಳುಹಿಸುವ ಬದಲಿಗೆ ಎಲ್ಲರೂ ಪ್ರವಾದಿಗಳಾಗುತ್ತಿದ್ದರು. ಹೀಗೆ ನಿರಾಕರಣೆ ಮತ್ತು ಅಪನಂಬಿಕೆ ಇರುತ್ತಿರಲಿಲ್ಲ. ಆದರೆ ಜಗತ್ತಿನಲ್ಲಿ ಎಲ್ಲರು ಒಳ್ಳೆಯವರಾಗಲಿಲ್ಲ ಮತ್ತು ದೇವರು ಪ್ರವಾದಿಗಳ ಸರಪಳಿಯನ್ನು ನಿಲ್ಲಿಸಲಿಲ್ಲ.

**ಹುದವ್ವರಹ್ಮತಲ್ಲಿಖೌಮಿಯ್ಯುಮಿನೂನ್** ನಲ್ಲಿ ಈ ವಿಷಯದ ಎರಡನೇ ಅಂಶವನ್ನು ತೆಗೆದುಕೊಂಡಿದ್ದಾರೆ ಅಂದರೆ ಭಿನ್ನಾಭಿಪ್ರಾಯ ಹೊಂದಿರುವವರಿಗೆ, ಪವಿತ್ರ ಖುರ್‌ಆನ್‌ನ ಪ್ರಕಾರ ಅವರ ಭಿನ್ನಾಭಿಪ್ರಾಯಗಳನ್ನು ತೆಗೆದುಹಾಕುವುದು ಮತ್ತು ಈ ಖುರ್‌ಆನ್ ಅನ್ನು ನಂಬುವವರಿಗೆ ಪ್ರಗತಿ ಮತ್ತು ಕರುಣೆಯನ್ನು ಸಾಧನವಾಗಿಸಿದ್ದಾರೆ.

**(ತಫ್ಸೀರ್ ಕಬೀರ್, ಸಂಪುಟ–4, ಪುಟ–189, ಪ್ರಕಟಿತ 2010 ಖಾದಿಯಾನ್)**

...*...*...*...

## ಪ್ರಮುಖ ಪ್ರಕಟಣೆ: ಅಹ್ಮದಿ ವಿದ್ಯಾರ್ಥಿಗಳ ಗಮನಕ್ಕೆ

ಜಾಮಿಯಾ ಅಹ್ಮದಿಯಾ ಖಾದಿಯಾನ್ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಸ್ಥಾಪಿಸಿದ ಪವಿತ್ರ ವಿದ್ಯಾಸಂಸ್ಥೆಯಾಗಿದೆ. ಅಲ್ಲಿ ಇಲ್ಲಿಯವರೆಗೆ ನೂರಾರು ಉಲಮಾಅ್ ಮತ್ತು ಮುಬಲ್ಲಿಗ್ ನವರು (ವಿದ್ವಾಂಸರು) ವಿದ್ಯಾವಂತರಾಗಿ ಇಸ್ಲಾಮಿನ ನಿಜವಾದ ಶಿಕ್ಷಣಗಳನ್ನು ಲೋಕದ ಮೂಲೆ ಮೂಲೆಯವರೆಗೆ ತಲುಪಿಸುವ ತಮ್ಮ ಕರ್ತವ್ಯಗಳನ್ನು ನೆರವೇರಿಸುತ್ತಿದ್ದಾರೆ. ಸಯ್ಯಿದುನಾ ಹುಝೂರ್ ಅನ್ವರ್(ಅತಬಿಅ) ಅವರು ಹಲವಾರು ಸಂದರ್ಭಗಳಲ್ಲಿ ಅಹ್ಮದಿ ವಿದ್ಯಾರ್ಥಿಯರನ್ನು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಸ್ಥಾಪಿಸಿದ ಈ ಪವಿತ್ರ ಧಾರ್ಮಿಕ ವಿದ್ಯಾಸಂಸ್ಥೆಯಿಂದ ಶಿಕ್ಷಣ ಪಡೆದು ಸಂಘಟನೆಯ ಸೇವೆ ಸಲ್ಲಿಸಲು ಗಮನ ಸೆಳೆದಿದ್ದಾರೆ. ಆದ್ದರಿಂದ ಸಯ್ಯಿದುನಾ ಹುಝೂರೆ ಅನ್ವರ್(ಅಅಬಿಅ) ರವರ ನಿರ್ದೇಶನಗಳ ಪ್ರಕಾರ ಹೆಚ್ಚಿನ ಸಂಖ್ಯೆಯಲ್ಲಿ ವಾಖಿಫೀನ್ ನೌ ಮತ್ತು ವಾಖಿಫೀನೇತರರು ವಿದ್ಯಾರ್ಥಿಗಳು ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶ ಪಡೆದು ಧಾರ್ಮಿಕ ಜ್ಞಾನ ಪಡೆದು ಸಂಘಟನೆಗೆ ಸೇವೆ ನೀಡಲು ಮುಂದಾಗಬೇಕಾಗಿದೆ. ಹೀಗೆ ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶ ಬಯಸುವವರು– ವಖ್ಫೆ ನೌ ಭಾರತ (ನಝಾರತ್ ತಅ್‌ಲೀಮ್) ವಿಭಾಗದೊಡನೆ ಸಂಪರ್ಕಿಸಿರಿ. ಶೀಘ್ರ, ಅತೀ ಶೀಘ್ರವಾಗಿ ಜಾಮಿಯಾ ಅಹ್ಮದಿಯಾಗೆ ಪ್ರವೇಶ ಅರ್ಜಿ ತುಂಬಿ ದಿನಾಂಕ: 30 ಜೂನ್ ವರೆಗೆ ದಫ್ತರ್ ವಖ್ಫೆ ನೌ ಭಾರತ (ನಝಾರತ್ ತಅ್‌ಲೀಮ್) ಗೆ ಕಳುಹಿಸತಕ್ಕದ್ದು.

ಪ್ರವೇಶ ಪಡೆಯಲು ಕೆಳಗೆ ನಮೂದಿಸಿದ ಷರತ್ತುಗಳಿವೆ:

(1) ಮೆಟ್ರಿಕ್ ಪಾಸ್ ವಿದ್ಯಾರ್ತಿಗಳಿಗಾಗಿ ವಯಸ್ಸು ಮಿತಿ 17 ವರ್ಷ ಮತ್ತು +2 ಪಾಸ್ ಆದವರಿಗೆ ವಯೋಮಿತಿ 19 ವರ್ಷ.

(2) ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶ ಪಡೆಯಲು ನ್ಯಾಷನಲ್ ಕೆರಿಯರ್ ಪ್ಲಾನಿಂಗ್ ಕಮೀಟಿ ವಖ್ಫೆ ನೌ ಭಾರತ ವಿದ್ಯಾರ್ಥಿಗಳ ಸಂದರ್ಶನ (Interview) ಮತ್ತು ಲಿಖಿತ ಪರೀಕ್ಷೆ (written test) ತೆಗೆದುಕೊಳ್ಳಲಾಗುವುದು ಮತ್ತು ಜಾಮಿಯಾ ಅಹ್ಮದಿಯಾಗಾಗಿ ಅವರನ್ನು Select ಮಾಡಿಕೊಳ್ಳುವುದು. ಲಿಖಿತ ಪರೀಕ್ಷೆಯಲ್ಲಿ ಪವಿತ್ರ ಖುರ್‌ಆನ್, ಇಸ್ಲಾಂ, ಅಹ್ಮದಿಯತ್, ಧಾರ್ಮಿಕ ಜ್ಞಾನ, ಉರ್ದು, ಇಂಗ್ಲೀಷ್, ಸಾಮಾನ್ಯ ಜ್ಞಾನ (General Knowledge) ಕುರಿತು ಪ್ರಶ್ನೆಗಳನ್ನು ಇರಿಸಲಾಗುವುದು.

(3) ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಉತ್ತೀರ್ಣರಾದ ವಿದ್ಯಾರ್ತಿಗಳಿಗೆ ನೂರ್ ಹಾಸ್ಪಿಟಲ್ ಖಾದಿಯಾನ್‌ನಿಂದ ಆರೋಗ್ಯ ತಪಾಸಣೆ (Medical Test) ನಡೆಸಲಾಗುವುದು. ಲಿಖಿತ ಪರೀಕ್ಷೆ, ಸಂದರ್ಶನ ಮತ್ತು ಆರೋಗ್ಯ ತಪಾಸಣೆಯಲ್ಲಿ ಪಾಸಾದವರ ವಿದ್ಯಾರ್ಥಿಗಳನ್ನು ಸಯ್ಯಿದುನಾ ಹುಝೂರೆ ಅನ್ವರ್(ಅಬಿಅ) ಅವರ ಅನುಮತಿ ಪಡೆದು ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶ ನೀಡಲಾಗುವುದು.

(4) ಪದವಿದಾರರು (Gradudate) ವಿದ್ಯಾರ್ಥಿಗಳನ್ನು ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶಕ್ಕಾಗಿ ಆಧ್ಯತೆ ನೀಡಲಾಗುವುದು.

**Addmission Form ಅನ್ನು E-Mail ಮೂಲಕ ಪಡೆಯಲು:**

**waqfenau@qadian.in**

**WAQE-E-NAU DEPARTMENT (NAZARAT TALEEM)**

**DARUL BALAGH, CIVIL LINE, QADIAN.**

**Distt. GURDASPUR, PUNJAB (INDIA), PIN: 143516**

**CONTACT: 01872–500975, 9988991775**

**(ಸದರ್ ನ್ಯಾಷನಲ್ ಕೇರಿಯರ್ ಪ್ಲಾನಿಂಗ್ ಕಮೀಟಿ ವಖ್ಫೆ ನೌ ಭಾರತ್)**

ಖಿಲಾಫತ್ ಮೂಲಕ ಇಸ್ಲಾಮ್ ಅಹ್ಮದಿಯತ್ತಿನ ಶಿಕ್ಷಣವನ್ನು ಪೂರ್ಣ ಶಕ್ತಿಯಿಂದ ಲೋಕದಾದ್ಯಂತ ಹರಡಿಸಲಾಗುತ್ತದೆ.

ಖಿಲಾಫತ್‌ನೊಂದಿಗೆ ಪೂರ್ಣ ನಿಷ್ಠೆ ಮತ್ತು ದೃಢ ಸಂಬಂಧ ತಮ್ಮ ವಿಶ್ವಾಸವರ್ಧನೆಗಾಗಿ ಅತ್ಯಂತ ಅನಿವಾರ್ಯವಾಗಿದೆ.

ನಮ್ಮ ಎಲ್ಲ ಪ್ರಯತ್ನಗಳನ್ನು ಮೀಸಲಿಡುವ ಅವಶ್ಯಕತೆ ಅಷ್ಟೇ ಅಲ್ಲ ಬದಲು ಇದರ ಅನುಗ್ರಹಪೂರ್ಣ ನೆರಳಿನಲ್ಲಿ ಎಂತಹ ವಾತಾವರಣ ನಿರ್ಮಿಸಬೇಕಾಗಿದೆ ಎಂದರೆ ಅದರಲ್ಲಿ ಐಕ್ಯತೆ, ಪರಸ್ಪರ ದೃಢ ಸಂಬಂಧ ಬೆಳೆಸುವುದು ಹಾಗೂ ಭ್ರಾತೃತ್ವ ಕಾಣುವಂತಾಗಬೇಕು

ಪ್ರತಿಯೊಬ್ಬ ಖಾದಿಮನು ಅನಿವಾರ್ಯವಾಗಿ ಕುತುಬಾ ಜುಮುಅ ಪ್ರಾಮಾಣಿಕವಾಗಿ ಆಲಿಸಬೇಕು. ಮತ್ತು ಅದರಲ್ಲಿ ನೀಡಿರುವ ಉಪದೇಶಗಳ ಪ್ರಕಾರ ನಡೆದುಕೊಳ್ಳಬೇಕು.

**ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಬಾಂಗ್ಲಾದೇಶದ ವಾರ್ಷಿಕ ಇಜ್ತಿಮಾ–2022 ರ ಸಂದರ್ಭದಲ್ಲಿ ಸಯ್ಯದ್‌ನಾ ಹಝ್ರತ್ ಅಮೀರುಲ್ ಮುಮಿನೀನ್ ಖಲಿಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರ ವಿಶ್ವಾಸವರ್ಧಕ ವಿಶೇಷ ಸಂದೇಶ.**

بسم اللہ الرحمٰن الرحیم

نحمدہ و نصلی علی رسولہ الکریم و علی عبدہ المسیح الموعود

خدا کے فضل اور رحم کے ساتھ

ھو الناصر

ಇಸ್ಲಾಮಾಬಾದ್ (U.K)
30.07.2022

ಬಾಂಗ್ಲಾದೇಶ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾದ ಪ್ರೀತಿಯ ಸದಸ್ಯರೇ

ಅಸ್ಸಲಾಮು ಅಲೈಕುಂ ವ ರಹ್ಮತುಲ್ಲಾಹಿ ವ ಬರಕಾತುಹು

ನಿಮ್ಮ ಅಧ್ಯಕ್ಷರು 5ನೇ ವಾರ್ಷಿಕ ನೆಷ್ನಲ್ ಇಜ್ತಿಮಾದ ಶುಭ ಸಂದರ್ಭದಲ್ಲಿ ನಿಮಗಾಗಿ ಸಂದೇಶವನ್ನು ನೀಡಲು ಪ್ರಾರ್ಥಿಸಿಕೊಂಡಿದ್ದರು.

ಈ ಅನುಗ್ರಹಪೂರ್ಣ ಸಂದರ್ಭದಲ್ಲಿ ನನ್ನ ಸಂದೇಶವೇನೆಂದರೆ ಅಲ್ಲಾಹನು ನಬಿ(ಸ) ರವರ ಭವಿಷ್ಯವಾಣಿಯಂತೆ ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರನ್ನು ಇಸ್ಲಾಮಿನ ನಿಜವಾದ ಆತ್ಮವನ್ನು ಪ್ರದರ್ಶಿಸಲು ಕಳುಹಿಸಿದನು. ಮನುಷ್ಯನು ತಾನು ನಿರ್ಮಿಸಿದ ಕಾನೂನು, ಮಿಥ್ಯ ನಂಬಿಕೆಗಳು, ನವೀನ ಆಚರಣೆಗಳ ಮತ್ತು ಮೂಢನಂಬಿಕೆಗಳಿಗೆ ತುತ್ತಾಗಿದ್ದನು. ಹಝುರತ್ ಮಸೀಹ್ ಮೌಊದ್(ಅ) ಮಾನವಕುಲದ ಮುಂದೆ ಇಸ್ಲಾಮಿನ ಯಥಾರ್ಥ ಸಂದೇಶವನ್ನು ಪ್ರಸ್ತುತಪಡಿಸಿದರು. ನಿಜವಾದ ಮಾರ್ಗದರ್ಶನ ಪಡೆಯ ಬಯಸುವವರನ್ನು ಸರಿಯಾದ ಮಾರ್ಗದಲ್ಲಿ ಸನ್ಮಾರ್ಗದ ಪ್ರಕಾಶದಿಂದ ಪ್ರಕಾಶಿತನಾಗಿ ಮಾಡಿದರು.

ಹಝ್ರತ್ ಮಸೀಹ್ ಮೌಊದ್(ಅ) ರವರ ನಿಧನದ ನಂತರ ಖಿಲಾಫತ್‌ನಂತ ಅನುಗ್ರಹಪೂರ್ಣ ವ್ಯವಸ್ಥೆ ಅದೇ ಮಹೋನ್ನತ ಉದ್ದೇಶಕ್ಕಾಗಿ ಸ್ಥಾಪನೆಯಾಯಿತು. ಅಹ್ಮದಿಯಾ ಖಿಲಾಫತ್ತಿನ ಮೂಲಕ ಇಸ್ಲಾಂ ಅಹ್ಮದಿಯತ್ ಪೂರ್ಣ ಶಕ್ತಿಯಿಂದ ಲೋಕದಾದ್ಯಂತ ಹರಡಿಸಲಾಗುತ್ತಿದೆ ಮತ್ತು ಹಝ್ರತ್ ಮಸೀಹ್ ಮೌಊದ್(ಅ) ತೋರಿಸಿದ ಮಾರ್ಗವೇ ಲೋಕದ ಮೂಲೆ ಮೂಲೆಯವರೆಗೆ ತಲುಪಿಸಲಾಗುತ್ತಿದೆ. ಆದ್ದರಿಂದ ನಿಮ್ಮ ಹೆಗಲ ಮೇಲೆ ಬಾಂಗ್ಲಾದೇಶದ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಸದಸ್ಯರಾದ ನೆಲೆಯಲ್ಲಿ ಒಂದು ಮಹೋನ್ನತ ಜವಾಬ್ದಾರಿ ಏನೆಂದರೆ ಹಝ್ರತ್ ಮಸೀಹ್ ಮೌಊದ್(ಅ) ರವರ ಸಂದೇಶ, ಅವರ ಇಸ್ಲಾಮಿನ ನಿಜವಾದ ಶಿಕ್ಷಣವನ್ನು ದೇಶ ದೇಶದವರೆಗೆ ತಲುಪಿಸಬೇಕು. ಇದು ನೀವು ಆಧ್ಯಾತ್ಮಿಕವಾಗಿ ಹಾಗೂ ನೈತಿಕತೆಯ ಉನ್ನತ ಮಟ್ಟ, ಪವಿತ್ರ ಖುರ್‌ಆನ್ ಮತ್ತು ಪೈಗಂಬರ್(ಸ) ರವರ ಚರಿತ್ರೆಯಂತೆ ರೂಢಿಸಿಕೊಂಡಾಗ ಮಾತ್ರ ಸಾಧ್ಯವಿದೆ.

ಆತ್ಮಶುದ್ಧಿಯು ಅಹ್ಮದಿಅತ್ ಹರಡುತ್ತಿರುವ ಒಂದು ಅತ್ಯುತ್ತಮ ಸಾಧನವಾಗಿದೆ. ಇಸ್ಲಾಮ್ ಧರ್ಮವು ಎಲ್ಲ ಸಮಸ್ಯೆಗಳಿಗೆ ಒಂದು ಪರಿಹಾರವನ್ನು ಪ್ರಸ್ತುತಪಡಿಸಿದೆ. ಆತ್ಮಶುದ್ಧಿಯ ಗುರಿಗಳನ್ನು ತಿಳಿಸಿದೆ. ದಿನನಿತ್ಯದ ನಮಾಝುಗಳ ಮೂಲಕ ಅಲ್ಲಾಹನ ಆರಾಧನೆ ಮಾಡುವುದು. ಪವಿತ್ರ ಖುರ್‌ಆನ್ ಪಠಿಸುವುದು ಮತ್ತು ಅದರ ಪ್ರತಿಯೊಂದು ಆದೇಶಧ ಪ್ರಕಾರ ನಡೆದುಕೊಳ್ಳುವುದು ಆತ್ಮಶುದ್ಧಿಗಾಗಿ ಮತ್ತು ಹೃದಯಪರಿವರ್ತನೆಗಾಗಿ ಮಾಡುವ ಉತ್ತಮ ಸಾಧನೆಗಳಾಗಿವೆ ಅಲ್ಲದೇ ಇವು ನಮ್ಮ ಧರ್ಮದ ಪ್ರಮುಖ ಭಾಗಗಳಾಗಿವೆ. ಅದನ್ನು ಪ್ರತಿಯೊಬ್ಬ ಅಹ್ಮದಿಯು ಉತ್ತಮ ರೀತಿಯಲ್ಲಿ ನಿರ್ವಹಿಸಬೇಕಾಗಿದೆ.

ಅದಲ್ಲದೇ ಅಹ್ಮದಿಯಾ ಖಿಲಾಫತ್ ಜೊತೆ ಪೂರ್ಣನಿಷ್ಠೆ ಮತ್ತು ದೃಢಸಂಬಂಧ ನಮ್ಮ ನಂಬಿಕೆಯ ಅಭಿವೃದ್ಧಿಗಾಗಿ, ಅದು ವೈಯಕ್ತಿಕ ರೀತಿಯಿಂದಾಗಲಿ ಅಥವಾ ಸಾಮೂಹಿಕ ನೆಲೆಯಿಂದಾಗಲಿ ಅತ್ಯಂತ ಅನಿವಾರ್ಯವಾಗಿರುತ್ತದೆ. ಆದ್ದರಿಂದ ಕೇವಲ ನಮ್ಮ ಎಲ್ಲ ಪ್ರಯತ್ನಗಳನ್ನು ಮೀಸಲಿಡುವ ಅವಶ್ಯಕತೆ ಅಷ್ಟೇ ಅಲ್ಲ ಬದಲು ಇದರ ಅನುಗ್ರಹಪೂರ್ಣ ನೆರಳಿನಲ್ಲಿ ಎಂತಹ ವಾತಾವರಣ ನಿರ್ಮಿಸಬೇಕಾಗಿದೆ ಎಂದರೆ ಅದರಲ್ಲಿ ಐಕ್ಯತೆ, ಪರಸ್ಪರ ದೃಢ ಸಂಬಂಧ ಬೆಳೆಸುವುದು ಹಾಗೂ ಭ್ರಾತೃತ್ವ ಕಾಣುವಂತಾಗಬೇಕು

ಪ್ರತಿಯೊಬ್ಬ ಖಾದಿಮನು ಅನಿವಾರ್ಯವಾಗಿ ಕುತುಬಾ ಜುಮುಅ ಪ್ರಾಮಾಣಿಕವಾಗಿ ಆಲಿಸಬೇಕು. ಮತ್ತು ಅದರಲ್ಲಿ ನೀಡಿರುವ ಉಪದೇಶಗಳ ಪ್ರಕಾರ ನಡೆದುಕೊಳ್ಳಬೇಕು. ಏಕೆಂದರೆ ಈ ಕುತುಬಾಗಳು ನಮ್ಮ ಆಧ್ಯಾತ್ಮಿಕ ಉನ್ನತಿಗಾಗಿ ಬುನಾಗಿಯಾಗಿದೆ. ಅದು ಧಾರ್ಮಿಕ ನೆಲೆಯಿಂದಲೂ ನಮ್ಮ ಆಧ್ಯಾತ್ಮಿಕ ಮತ್ತು ನೈತಿಕ ಬೆಳವಣಿಗೆಗಾಗಿ ಅವಶ್ಯಕವಾಗಿದೆ.

ಒಬ್ಬರು ಮತ್ತೊಬ್ಬರೊಡನೆ ದೃಢ ಸಂಬಂಧ ಸ್ಥಾಪಿಸುವುದು ಸಹ ಅನಿವಾರ್ಯವಾಗಿದೆ. ಪರಸ್ಪರ ಪ್ರೀತಿಯಿಂದಿರಬೇಕು. ಅಲ್ಲಾಹನು ನೀಡಿದ ಖಿಲಾಫತ್ತಿನ ಆಶ್ರಯದಲ್ಲಿ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಮತ್ತು ಅವನ ಸಾಮಿಪ್ಯಗಳಿಸುವ ಸಲುವಾಗಿ ಮಾನವೀಯತೆಯ ಸೇವೆಯನ್ನು ಮಾಡಬೇಕು.

ನನಗೆ ಭರವಸೆ ಇದೆ. ನನ್ನ ಈ ಸಂದೇಶ ನಿಮ್ಮ ವಿಶ್ವಾಸವೃದ್ಧಿಗೆ ಕಾರಣವಾಗಬಹುದು. ಮತ್ತು ಇಸ್ಲಾಮ್ ಅಹ್ಮದಿಅತ್‌ನ ಈ ಸಂದೇಶ ಕೇವಲ ನಿಮ್ಮ ದೇಶದ ಯುವಕರಿಗಷ್ಟೇ ತಲುಪಿಸುವುದಿಲ್ಲ. ಬದಲು ಬಾಕಿ ಉಳಿದ ಎಲ್ಲ ಸಮಾಜದಲ್ಲೂ ಹರಡುವುದು.

ಅಲ್ಲಾಹನು ನಿಮ್ಮ ಇಜ್ತಿಮಾವನ್ನು ಎಲ್ಲ ರೀತಿಯಿಂದಲೂ ಅನುಗ್ರಹಿಸಲಿ. ಮತ್ತು ಇದರ ಎಲ್ಲ ಕಾರ್ಯಕ್ರಮಗಳಿಂದ, ಚಟುವಟಿಕೆಗಳಿಂದ ನೀವು ಫಲ ಪಡೆಯುವಂತಾಗಲಿ. ಅಲ್ಲಾಹನು ಎಂದೆಂದಿಗೂ ನಿಮ್ಮ ಜೊತೆಯಿರಲಿ. ತನ್ನ ಪ್ರೀತಿಯ ಬಾಹುಗಳಲ್ಲಿ ಸೇರಿಸಿಕೊಳ್ಳಲಿ. ಆಮೀನ್

ವಸ್ಸಲಾಮ್
ಖಾಕ್ಸಾರ್
(ಸಹಿ) ಮಿರ್ಝಾ ಮಸ್ರೂರ್ ಅಹ್ಮದ್
ಖಲೀಫತುಲ್ ಮಸೀಹ್ ಖಾಮಿಸ್

## ರಾಷ್ಟ್ರೀಯ ವರದಿಗಳು

### 56ನೇ ಜಲ್ಸಾ ಸಾಲಾನ ಕೇರಂಗ್ ಯಶಸ್ವಿಯಾಗಿ ಹಮ್ಮಿಕೊಳ್ಳಲಾಯಿತು

13 ಮತ್ತು 14ನೇ ಮೇ 2023 ಶನಿವಾರ ಮತ್ತು ಭಾನುವಾರ ರಂದು ಜಲ್ಸಾ ಸಾಲಾನ ಕೇರಂಗ್ (ಒಡಿಶಾ ಪ್ರಾಂತ್ಯ) ನಲ್ಲಿ ನಡೆಸಲಾಯಿತು ಮತ್ತು ಯಶಸ್ವಿಯಾಗಿ ಮುಕ್ತಾಯವಾಯಿತು. ಅಹ್ಮದಿಯಾ ಜಮಾಅತ್ ಕೇರಂಗ್ ಅಲ್ಲದೆ ಅನ್ಯ ಪ್ರಾಂತ್ಯಗಳ ಅಹ್ಮದಿಯಾ ಜಮಾಅತ್‌ನ 1450 ಸದಸ್ಯರುಗಳು ಈ ಜಲ್ಸದಲ್ಲಿ ಭಾಗವಹಿಸಿದರು. ಕೇಂದ್ರ ಪ್ರತಿನಿಧಿಯಾಗಿ ಮಾನ್ಯ ಅಬ್ದುಲ್ ವಕೀಲ್ ನಿಯಾಝ್ ಸಾಹಿಬ್ ನಾಯಿಬ್ ನಾಝಿರ್ ಇಸ್ಲಾಹ್ ವ ಇರ್ಶಾದ್ ಸೌತ್ ಇಂಡಿಯಾ ಮತ್ತು ಮಾನ್ಯ ಸಯ್ಯದ್ ಫಹೀಮ್ ಅಹ್ಮದ್ ಸಾಹಿಬ್ ಮುಬಲ್ಲಿಗ್ ಸಿಲ್‌ಸಿಲಾ ದಲ್‌ವತ್ ಇಲಲ್ಲಾಹ್ ಸೌತ್ ಇಂಡಿಯಾ ಭಾಗವಹಿಸಿದ್ದರು. ಇಡೀ ಗ್ರಾಮದಾದ್ಯಂತ ವಿಶೇಷ ಶಿಸ್ತಿನ ವ್ಯವಸ್ಥೆ ಇತ್ತು. ಜಲ್ಸಾ ಸಭಾಂಗಣದಲ್ಲಿ ಪೊಲೀಸ್ ಪಡೆ ಕೂಡ ಇತ್ತು. ಎರಡೂ ದಿನದ ಜಲ್ಸವೂ ಒಟ್ಟು ನಾಲ್ಕು ಅಧಿವೇಶನಗಳನ್ನು ಒಳಗೊಂಡಿತ್ತು. ಮೊದಲ ಅಧಿವೇಶನ ಬೆಳಿಗ್ಗೆ 9:30 ರಿಂದ ಮಧ್ಯಾಹ್ನ 12:45 ರವರೆಗೆ ಮತ್ತು ಎರಡನೇ ಅಧಿವೇಶನವು ಸಂಜೆ 5:30 ರಿಂದ ರಾತ್ರಿ 9:30 ರವರೆಗೆ ನಡೆಯಿತು. ಉದ್ಘಾಟನಾ ಮತ್ತು ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಕೇಂದ್ರ ಪ್ರತಿನಿಧಿಗಳು ವಹಿಸಿದ್ದರು. ಮೊದಲ ದಿನದ ಎರಡನೇ ಅಧಿವೇಶನದ ಅಧ್ಯಕ್ಷತೆಯನ್ನು ವಿನೀತನು ವಹಿಸಿಕೊಂಡಿದ್ದನು ಮತ್ತು ಎರಡನೇ ದಿನದ ಮೊದಲ ಅಧಿವೇಶನದ ಅಧ್ಯಕ್ಷತೆಯನ್ನು ಕಟಕ್ ಜಿಲ್ಲೆಯ ಅಮೀರ್ ಮಾನ್ಯ ಅಬ್ದುಲ್ ಮಾಲಿಕ್ ಸಾಹಿಬ್ ವಹಿಸಿಕೊಂಡಿದ್ದರು. ಜಲ್ಸದಲ್ಲಿ ಒಟ್ಟು 14 ಭಾಷಣಗಳನ್ನು ಮಾಡಲಾಯಿತು. ಕೆಲವು ರಾಜಕೀಯ ವ್ಯಕ್ತಿಗಳು ಸೇರಿದಂತೆ 11 ಮುಸ್ಲಿಮೇತರ ಅತಿಥಿಗಳೂ ಜಲ್ಸಾದಲ್ಲಿ ಭಾಗವಹಿಸಿದ್ದರು. ಎಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನೂ ವ್ಯಕ್ತಪಡಿಸಿದ್ದಾರೆ. ಅವರಿಗೆ ಜಮಾಅತಿನ ಸಾಹಿತ್ಯವನ್ನು ಉಡುಗೊರೆಯಾಗಿ ನೀಡಲಾಯಿತು ಮತ್ತು ಅವರಿಗೆ ಶಾಲು ಹೊದಿಸಿ ಗೌರವಿಸಲಾಯಿತು. ಮಸ್ಜಿದ್ ಮಹಮೂದ್‌ನಲ್ಲಿ ಮಹಿಳೆಯರಿಗಾಗಿ ಮತ್ತು ಈದ್ ಗಾಹ್‌ನಲ್ಲಿ ಪುರುಷರಿಗಾಗಿ ಜಲ್ಸಾ ಆಯೋಜಿಸಲಾಗಿತ್ತು. ಮಿನಾರ್‌ನ ಧ್ವನಿವರ್ಧಕದಿಂದ ಜಲ್ಸದ ಧ್ವನಿಯನ್ನು ಗ್ರಾಮದಾದ್ಯಂತ ಸಾಗಿಸಲಾಯಿತು. ಈ ಸಭೆಯ ಉತ್ತಮ ಫಲಿತಾಂಶಗಳನ್ನು ಅಲ್ಲಾಹನು ಬಹಿರಂಗಪಡಿಸಲಿ. ಆಮೀನ್

**(ಅಮೀರ್ ಜಮಾಅತ್ ಅಹ್ಮದಿಯಾ ಕೇರಂಗ್, ಒಡಿಶಾ ಪ್ರಾಂತ್ಯ)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಮೇಲೆ ಆಗಿದೆ. ನಾನು ಘಾನಾದಲ್ಲಿದ್ದಾಗ ಪರಿಸ್ಥಿತಿ ತುಂಬಾ ಹದಗೆಟ್ಟಿತ್ತು ನಾನು ಸುಮಾರು ನಾಲ್ಕು ವರ್ಷ ಉತ್ತರ ಭಾಗದಲ್ಲಿ ಕಳೆದಿದ್ದೇನೆ ಮತ್ತು ದೂರ ದೂರದ ಉತ್ತರ ಕ್ಷೇತ್ರಗಳಲ್ಲಿ ಮತ್ತು ನಾಲ್ಕು ವರ್ಷ ದಕ್ಷಿಣ ಕ್ಷೇತ್ರಗಳಲ್ಲಿ ಕಳೆದಿದ್ದೇನೆ. 1985 ರಲ್ಲಿ ನಾನು ಘಾನಾ ತೊರೆದಿದ್ದೆ.

ನಂತರ ಅತಿಥಿಯೊಬ್ಬರು ಪ್ರಶ್ನಿಸಿದರು. ನನಗೆ ಪವಿತ್ರನನ್ನಾಗಿ ಮಾಡಿದ ನಿಮ್ಮ ಜಮಾಅತಿನ ಒಂದು ಮಾತು ಅದು. ಇತರ ಧರ್ಮಗಳ ಜನರೊಡನೆ ಉತ್ತಮವಾಗಿ ವ್ಯವಹರಿಸುವುದಾಗಿದೆ. ನಾವು ಭಿನ್ನತೆಯ ಹೊರತಾಗಿಯೂ ಜನರೊಂದಿಗೆ ಸಂಪರ್ಕವಹಿಸುವ ವಿಧಾನ ಯಾವುದಾಗಿದೆ? ಅದಕ್ಕೆ ಹುಝೂರ್ ಅನ್ವರ್ ನುಡಿದರು ನಮ್ಮ ದಾವೆಯಾಗಿದೆ. ಇಸ್ಲಾಂ ಧರ್ಮವು ಎಲ್ಲ ಧರ್ಮಗಳನ್ನು ಸ್ವೀಕರಿಸುವ ಏಕೈಕ ಧರ್ಮವಾಗಿದೆಯೆಂದು. ನಾವು ಮೂಶೆ ಸಹ ಒಬ್ಬ ಪ್ರವಾದಿಯಾಗಿದ್ದರು. ಯೇಸು ಸಹ ಪ್ರವಾದಿಯಾಗಿದ್ದರು. ಎಲ್ಲ ಧರ್ಮಗಳು ಮೂಲದಲ್ಲಿ ಸತ್ಯವಾದ ಧರ್ಮಗಳಾಗಿದ್ದವು ಎಂದು ನಂಬುವವರಾಗಿದ್ದೇವೆ. ನಮಗೆ ಪರಸ್ಪರ ಸಹೋದರತೆಯಿಂದ ಇರಬೇಕಾಗಿದೆ ಎಂದು ನಾವು ಹೇಳುತ್ತೇವೆ. ಪರಸ್ಪರ ಗೌರವಿಸಬೇಕು ಎಂದು ನಾವು ಹೇಳುತ್ತೇವೆ. ಈ ಮೂಲಭೂತ ಮಾತುಗಳನ್ನು ತಿಳಿದುಕೊಂಡರೆ ನಾವು ಶಾಂತಿಯಿಂದ ಇರಬಹುದಾಗಿದೆ.

ಈ ಭೇಟಿಯ ನಂತರ ಆ ಎಲ್ಲ ಅತಿಥಿಗಳು ಹುಝೂರ್ ಅನ್ವರ್ ಅವರ ಜೊತೆ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

**ಕಾಂಗ್ರೆಸ್ಸಿನವರೊಬ್ಬರ ಭೇಟಿ**

ಅನಂತರ U.S ಕಾಂಗ್ರೆಸ್‌ಮೆನ್ ರಾಜಕೃಷ್ಣ ಮೂರ್ತಿ ಸಾಹಿಬ್ ಹುಝೂರರ ಭೇಟಿ ಮಾಡುವ ಭಾಗ್ಯ ಪಡೆದರು. ಹುಝೂರ್ ಅನ್ವರ್ ಅವರು ವಿಚಾರಿಸಿದಾಗ ಅವರು ತಿಳಿಸಿದರು. ನನ್ನ ಸಂಬಂಧ ಭಾರತದ ಅಂದರೆ ದಕ್ಷಿಣ ಭಾರತದ ಚೆನ್ನೈ (cheenai) ಯಿಂದಾಗಿದೆ. ಬಹಳ ಸಣ್ಣ ವಯಸ್ಸಿನಲ್ಲಿ ತಂದೆ ತಾಯಿಯರ ಜೊತೆಯಲ್ಲಿ ಅಮೇರಿಕಾ ಬಂದಿದ್ದೆವು.

ಹುಝೂರೆ ಅನ್ವರ್[ಅತಬಿಅ] ಹೇಳಿದರು. ನಾವು ಸಹ ಚೆನ್ನಾಗಿಯೆ ಬಂದಿರುತ್ತೇನೆ. ನಾನು ಈ ಕ್ಷೇತ್ರಕ್ಕೆ ಎರಡನೇ ಸಲ ಬಂದಿರುತ್ತೇನೆ. ಈ ಮೊದಲು 2012 ರಲ್ಲಿ ಬಂದಿದ್ದೆ.

ಕಾಂಗ್ರೆಸ್‌ಮೆನ್ ರಾಜಾಕೃಷ್ಣ ಸಾಹಿಬ್ ಹೇಳಿದರು. ಅಮೇರಿಕಾದಲ್ಲಿ ನಿಮ್ಮ ಸಮುದಾಯ ತುಂಬಾ ಚೆನ್ನಾಗಿದೆ. ನೀವು ಇಲ್ಲಿ ಮತ್ತೆ ಮತ್ತೆ ಬರುತ್ತೀರಿ, ಆಗ ಹುಝೂರ್ ಹೇಳಿದರು. ಲೋಕದಾದ್ಯಂತ ನಮ್ಮ ಜಮಾಅತ್ ಇದೆ. ಎಲ್ಲ ಕಡೆ ಜಮಾಅತ್ ಬಾಂಧವರು ನನ್ನ ನಿರೀಕ್ಷೆಯಲ್ಲಿದ್ದಾರೆ. ಯು.ಕೆಯಲ್ಲಿ ಜಮಾಅತಿನ ಕೇಂದ್ರ ಇಸ್ಲಾಮಾಬಾದ್ ಟಿಲ್ಫೋರ್ಡ್ ಬಗ್ಗೆಯೂ ವಿವರ ಕೇಳಿಬಂತು. ಹುಝೂರ್ ಹೇಳಿದರು. ಇಲ್ಲಿ ನಮ್ಮ ಕೇಂದ್ರ ಕಚೇರಿಗಳಿವೆ.

ಕಾಂಗ್ರೆಸ್‌ಮೆನ್‌ರವರ ಹುಝೂರರ ಜೊತೆಗಿನ ಈ ಭೇಟಿ 6:10 ಗಂಟೆಯವರೆಗೆ ನಡೆಯಿತು. ನಂತರ ಅವರು ಹುಝೂರರ ಜೊತೆ ಫೋಟೋ ಸಹ ತೆಗೆಯಿಸಿಕೊಂಡರು. (ಮುಂದುವರೆದಿದೆ)

ವರದಿ: ಮಾನ್ಯ ಅಬ್ದುಲ್ ಮಾಜಿದ್ ತೌಹಿರ್ ಸಾಹಿಬ್.
(Add. ವಕೀಲುತ್ತಬ್ಶೀರ್ ಲಂಡನ್, ಯು.ಕೆ)
(ಆಧಾರ: ಅಖ್‌ಬಾರೆ ಬದರ್ 13–20 ಅಕ್ಟೋಬರ್ 2022)

*********

### ಪವಿತ್ರ ಖುರ್‌ಆನ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ.ಆದರೆ ಜನರು ಅದನ್ನು ಅರಿತಿಲ್ಲ. ***(ಮಲ್‌ಫೂಝಾತ್ ಸಂಪುಟ–2, ಪುಟ–344)***

ಪವಿತ್ರ ಖುರ್‌ಆನಿನ ಮಹಿಮೆ ಎಷ್ಟು ಉನ್ನತವಾಗಿದೆಯೆಂದರೆ ಅದು ಎಲ್ಲ ಮಹಿಮೆಗಳಿಗಿಂತ ಶ್ರೇಷ್ಠವಾಗಿದೆ. ಅದು **"ಹಕಮ್"** ಆಗಿದೆ ಎಂದರೆ ಅಂತಿಮವಾಗಿ ತೀರ್ಮಾನ ಮಾಡುವುದು; ಅದು **"ಮುಹೈಮಿನ್"** ಎಂದರೆ ಅದು ಎಲ್ಲ ಮಾರ್ಗದರ್ಶನಗಳ ಸಂಗ್ರಹವಾಗಿದೆ. ಅದು ಎಲ್ಲ ಸಾಕ್ಷ್ಯಾಧಾರಗಳನ್ನು ತನ್ನಲ್ಲಿ ಜಮಾಯಿಸಿದೆ ಮತ್ತು ಶತ್ರು ಸಮೂಹವನ್ನು ಚೆಲ್ಲಾಪಿಲ್ಲಿಯಾಗಿ ಮಾಡಿದೆ. ಅದರಲ್ಲಿ ಎಲ್ಲ ಸಂಗತಿಗಳ ವಿವರಣೆಗಳಿವೆ. ಅದರಲ್ಲಿ ನಡೆಯಲಿರುವ ಮತ್ತು ನಡೆದ ಸಂಭವಗಳ ಸಮಾಚಾರಗಳಿವೆ. ಅಸತ್ಯವು ಅದರ ಹಿಂದಿನಿಂದಾಗಲೀ ಮುಂದಿನಿಂದಾಗಲೀ ನುಸುಳಲಾರದು. ಅದು ಸರ್ವ ಶಕ್ತನಾದ ದೇವನ ಪ್ರಕಾಶವಾಗಿದೆ. **(ಖುತ್‌ಬ ಇಲ್‌ಹಾಮಿಯಾ; ರೂಹಾನೀ ಖಝಾಇನ್ ಸಂಪುಟ–16, ಪುಟ–103)**

### ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 27, 28 ಮತ್ತು 29ನೇ ಅಕ್ಟೋಬರ್ 2023 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

### *128 ನೇ ಜಲ್ಸಾ ಸಾಲಾನ ಖಾದಿಯಾನ್ 29, 30, 31 ಡಿಸೆಂಬರ್ 2023ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 128ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 29, 30 ಮತ್ತು 31ನೇ ಡಿಸೆಂಬರ್ 2023 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮುಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 13 July 2023, Issue No. 28

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ–27ರ ಉಳಿದ ಭಾಗ ಮುಂದುವರಿಸಲಾಗಿದೆ)*

### ಒಬ್ಬರು ಡಾಕ್ಟರರ ಭೇಟಿ

ನಂತರ Dr. Katrina Lantos ಹುಝೂರೆ ಅನ್ವರ್(ಅತಬಿಅ) ರವರನ್ನು ಭೇಟಿ ಮಾಡಿದರು. ಅವರು Lantos Foundatioin for Human Rights and Justice ನ ಅಧ್ಯಕ್ಷರಾಗಿದ್ದರೆ, ಮತ್ತವರು United States commission internatioinal Religious Freedom ನ ಮಾಜಿ Chairman ಹಾಗೂ ಉಪಾಧ್ಯಕ್ಷರಾಗಿದ್ದರು.

ಅವರು ಹೇಳಿದರು. ಹುಝೂರೆ ಅನ್ವರ್(ಅತಬಿಅ) ಅವರ ಜೊತೆ ಭೇಟಿ ಮಾಡಿ ಒಂದು ಅಸಾಮಾನ್ಯ ಮತ್ತು ಒಂದು ವಿಶಿಷ್ಠ ರೀತಿಯ ಅನುಭವ ಲಭಿಸಿತು. ಅವರ ವ್ಯಕ್ತಿತ್ವದಲ್ಲಿ ಇರುವ ಪ್ರಕಾಶ ಮತ್ತು ಜಾಣ್ಮೆ ನಾವು ನಮ್ಮ ಅಂತರಾಳದಿಂದ ಅದನ್ನು ಅನುಭವಿಸುತ್ತಿದ್ದೇವೆ. ಮತ್ತು ಅವರೊಂದಿಗೆ ಕಳೆದ ಸಮಯವನ್ನು ನಾವು ನಮ್ಮ ದಿನಗಳು ಮತ್ತು ನಮ್ಮ ಸಪ್ತಾಹಗಳು ಉತ್ತಮವಾಗುತ್ತಿದೆ ಎಂದು ಭಾಸವಾಗುತ್ತಿದೆ.

ಡಾ॥ ಕತ್ರಿನಾ ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಮುಬಾಹಲದ ವಿವರ ನೀಡುತ್ತಾ ಹೇಳಿದರು. ಮುಬಾಹಲದ ಈ ಘಟನೆ ಆಶ್ಚರ್ಯ ಘಟನೆಯಾಗಿದೆ. ಅಹ್ಮದಿಯಾ ಸಂಘಟನೆಯ ಸ್ಥಾಪಕರು ಅಲ್ಲಾಹನ ಮೇಲೆ ವಿಶ್ವಾಸ ಇರಿಸಿ ವಿರೋಧ ಮತ್ತು ಅಸತ್ಯದ ವಿರುದ್ಧ ಜಯಗಳಿಸಿದರು.

ಆಗ ಹುಝೂರೆ ಅನ್ವರ್(ಅತಬಿಅ) ಹೇಳಿದರು. ಸ್ವತ: ತಾವು ಸಹ ಹಝ್ರತ್ ಮಸೀಹ್ ಮೌಊದ್(ಅ) ಅವರ ವಿಜಯಕ್ಕೆ ಸಾಕ್ಷಿಯಾಗಿದ್ದೀರಿ. ನೀವು ಜಮಾಅತಿಗೆ ಸಹಾಯವನ್ನು ನೀಡುತ್ತಿದ್ದೀರಿ. ನೀವು ಎಲ್ಲ ಕಡೆ ನಮ್ಮ ಸಂದೇಶವನ್ನು ತಲುಪಿಸುತ್ತಿದ್ದೀರಿ. ಅಹ್ಮದಿಯಾ ಜಮಾಅತ್ ಮಾತ್ರ ಲೋಕದಲ್ಲಿ ಶಾಂತಿಯ ಪ್ರಚಾರ ಮಾಡುವ ಮತ್ತು ಅದರಂತೆ ನಡೆದುಕೊಳ್ಳುವ ಏಕೈಕ ಜಮಾಅತ್ ಆಗಿದೆ ಎಂದು ಲೋಕಕೆ ತಿಳಿಸುತ್ತಿದ್ದೀರಿ.

ಅವರು ಪಾಕಿಸ್ತಾನದಲ್ಲಿ ಜಮಾಅತಿನ ಮೇಲೆ ಆಗುವ ಹಿಂಸಾಚಾರದ ಬಗ್ಗೆ ತಮ್ಮ ವ್ಯಥೆಯನ್ನು ವ್ಯಕ್ತಪಡಿಸಿದರು ಮತ್ತು ಹೇಳಿದರು ಈಗ ಸಮಸ್ಯೆ ಹಿಂಸೆಗಿಂತಲೂ ಮಿತಿಮೀರಿ ಹೋಗಿದೆ.

ಹುಝೂರೆ ಅನ್ವರ್(ಅತಬಿಅ) ಹೇಳಿದರು. ಈಗ ಮೌಲ್ವಿಗಳು ಹೇಳುತ್ತಿದ್ದಾರೆ. ನಮ್ಮ ಮಹಿಳೆಯರ ಗರ್ಭಪಾತಮಾಡಿಸಬೇಕೆಂದು. ಅವರು ಈಜಿಪ್ಟಿನ ಫರೋಹನಿಗಿಂತ ಕೆಟ್ಟವರಾಗಿದ್ದಾರೆ. ಈಜಿಪ್ಟಿನಲ್ಲಿ ಯಾವುದೇ ನವಜಾತ ಮಗುವನ್ನು ಕೊಲ್ಲಲು ಫರೋಹ ಹೇಳಿದಂತೆ.

ಅವರು ಹೇಳಿದರು. ನಿಮ್ಮ ಜಮಾಅತ್ ಕೆಟ್ಟದ್ದಕ್ಕೆ ಕೆಟ್ಟದ್ದಾಗಿ ಪ್ರತಿಕ್ರಿಯಿಸುವುದಿಲ್ಲ. ದ್ವೇಷವು ದ್ವೇಷದಿಂದ ಪ್ರತಿಕ್ರಿಯಿಸುವುದಿಲ್ಲ. ಇದು ಆಶ್ಚರ್ಯಕರ ಮಾತಾಗಿದೆ. ಆಗ ಹುಝೂರ್ ಹೇಳಿದರು. ನಾವು ಅದೇ ರೀತಿ ಉತ್ತರವನ್ನು ನೀಡಬಹುದು. ನಾವು ಹೆಚ್ಚು ವ್ಯವಸ್ಥಿತರಾಗಿದ್ದೇವೆ. ಆದರೆ ನಾವು ಹಾಗೆ ಮಾಡುವುದಿಲ್ಲ ಏಕೆಂದರೆ ಇದು ನಿಜವಾದ ಇಸ್ಲಾಮಿಕ್ ಬೋಧನೆ ಅಲ್ಲ.

### ಹದಿನಾಲ್ಕು ನಾಯಕರ ಗುಂಪು ಸಭೆ

ಈ ಕಾರ್ಯಕ್ರಮದ ಪ್ರಕಾರ ಹುಝೂರೆ ಅನ್ವರ್(ಅತಬಿಅ) ಅವರೊಂದಿಗೆ ಕೆಳಗಿನ 14 ನಾಯಕರು ಭೇಟಿ ಮಾಡುವ ಭಾಗ್ಯ ಪಡೆದರು.

Mr. Billy Mckinney
Mayor of Zion

Joyce Mason
State Congress women 61st District

Raja Krishna Moorti
U.S Congress Men 8th District

Katrina Lantos Swett
President Of Lantos Foundation Human Rights and Justice

Chelsea Hedquist
(Lantos Foundation)

Dr. Craig Considine Phd
Senior Lecturer Rice university. Dept. of Sociology

Sherief John Idle Burg
Police & Fire Commissioner

Cheri Neal
Supervisor Of Zion Township

Mary Lou Hiltibran
Emergency Services & Disaster Agency

Eric Reinhart
State Atorny Lake county

Rabi Malinda Zalma
Manager Of programmes
Tanenbaum Centre For Interreligious Understanding
New York

Anriane Johnson
State Centre 30th District

Dr. Gabrielle Lyon
Executive Director Illinois Humanities

ಈ ಸಾಮೂಹಿಕ ಭೇಟಿಯ ವೇಳೆ ಓರ್ವ ಮಹಿಳೆ ಹೇಳಿದರು. ನಾನು 2002 ರಲ್ಲಿ ಘಾನದ ಅಕ್ರದಲ್ಲಿದ್ದೆ. ನನಗೆ ತಿಳಿಯಿತು. ಹುಝೂರೆ ಅನ್ವರ್(ಅತಬಿಅ) ಸಹ ಘಾನಾದಲ್ಲಿದ್ದರೆಂದು. ನಾನು ಕೇಳಬಯಸುವುದೇನೆಂದರೆ ಘಾನಾ ವಾಸದ ನಿಮ್ಮ ಅನುಭವ ಹೇಗಿತ್ತು? ಅದಕ್ಕೆ ಹುಝೂರೆ ಅನ್ವರ್(ಅತಬಿಅ) ಉತ್ತರಿಸಿದರು. ನೀವು ಘಾನಾದಲ್ಲಿದ್ದುದು ಆರ್ಥಿಕ ಸ್ಥಿತಿ ಸುಧಾರಣೆಗೊಂಡ

*(ಪುಟ ಸಂಖ್ಯೆ–11 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.